ಇನ್ನೊಂದು ಜನತಾದಳ(ಜಾತ್ಯಾತೀತ) ಶಾಸಕಾಂಗ ಪಕ್ಷದ ರಾಜ್ಯಾಧ್ಯಕ್ಷರು ದಿನಾಂಕ 5.06.2009ರಂದು ನೀಡಿರುವ ಪತ್ರದಲ್ಲಿ ತಿಳಿಸಿರುವಂತೆ ಕೆಳಕಂಡವರು ಜನತಾದಳದ (ಜಾತ್ಯಾತೀತ) ಶಾಸಕಾಂಗ ಪಕ್ಷದ ಪದಾಧಿಕಾರಿಗಳಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಶಾಸಕಾಂಗ ಪಕ್ಷದ ನಾಯಕರು
ಶ್ರೀ ಬಂಡೆಪ್ಪ ಕಾಶಂಪುರ್ : ಶಾಸಕಾಂಗ ಪಕ್ಷದ ಉಪ ನಾಯಕರು.
ಶ್ರೀ ವೆಂಕಟರಾವ್ ನಾಡಗೌಡರು : ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು.

3. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ವಿಷಯ: ಮೈಸೂರು ನಗರದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಯ ಬಗ್ಗೆ.

– – –

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧಪಕ್ಷದ ನಾಯಕರು): ನಿಯಮ 60 ರಡಿಯಲ್ಲಿ ಒಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಬಹಳ ಪ್ರಮುಖವಾದ ವಿಚಾರ.

ಸಭಾಧ್ಯಕ್ಷರು: ಮೊದಲು ಪ್ರಶ್ನೋತ್ತರ ಮುಗಿಯಲಿ, ನಮಗೆ ನಿಲುವಳಿ ಸೂಚನೆ ಬಂದಿದೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಪ್ರಶ್ನೋತ್ತರ ಮುಗಿದ ಮೇಲೆ ತಾವು preliminary submission ಮಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಇದು ಅತ್ಯಂತ ಮಹತ್ವವಾದ ವಿಚಾರವಾಗಿರುವುದರಿಂದ ಇವತ್ತು ಈ ಸದನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಚರ್ಚೆ ಮಾಡಬೇಕಾಗಿದೆ. ಇವತ್ತು ಮೈಸೂರಿನಲ್ಲಿ ಅನೇಕ ಪ್ರದೇಶಗಳಲ್ಲಿ ಸೆಕ್ಷನ್ 144 ಜಾರಿಯಲ್ಲಿದೆ. ಇದು ಇತ್ತೀಚೆಗೆ ನಡೆದಿರುವಂಥ ಘಟನೆ. ಈ ಘಟನೆ ಬಗ್ಗೆ ರಾಜ್ಯದ ಹಿತದೃಷ್ಟಿಯಿಂದ ಇವತ್ತು ಆದ್ಯತೆ ಮೇರೆಗೆ ಚರ್ಚೆ ಮಾಡಬೇಕಾಗಿರುವುದು ಅತ್ಯಂತ ಅವಶ್ಯವಾಗಿದೆ. ಹಾಗಾಗಿ ತಾವು ದಯಮಾಡಿ ಪ್ರಶ್ನೋತ್ತರ ವೇಳೆಯನ್ನು ಕೂಡ ಬದಿಗೊತ್ತಿ ನನಗೆ ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಾನು ಈ ವಿಚಾರ ಎಷ್ಟು ಜರೂರು ಇದೆ, ಅಗತ್ಯವಿದೆ ಎಂದು ತಮ್ಮ ಮನವೊಲಿಸಲಿಕ್ಕೆ ಪ್ರಯತ್ನಿಸುತ್ತೇನೆ. ಹಾಗಾಗಿ ಇದು ಅತ್ಯಂತ ಮಹತ್ವವಿರುವುದರಿಂದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಇದಕ್ಕೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಆಮೇಲೆ ಪ್ರಶ್ನೋತ್ತರ ಮಾಡೋಣ. ಇವತ್ತು ನಾವು ಮೊದಲನೇ ಸಾರಿ ಸದನ ಸೇರುತ್ತಿದ್ದೇವೆ, ಇತ್ತೀಚೆಗೆ ಮೈಸೂರಿನಲ್ಲಿ ಈ ಘಟನೆ ನಡೆದಿದೆ. ಮೂರು ಜನ ಅಮಾಯಕರು ಪ್ರಾಣವನ್ನು

ಕಳೆದುಕೊಂಡಿದ್ದಾರೆ. ಸಾವಿರಾರು ಮನೆಗಳು ನಷ್ಟವಾಗಿವೆ. ಕೆಲವರು ಮನೆ ಬಿಟ್ಟು ಬೇರೆ ಕಡೆ ಹೋಗಿದ್ದಾರೆ. ಅವರು ನಿರಾಶ್ರಿತರಾಗಿದ್ದಾರೆ, ಇಂಥ ಪರಿಸ್ಥಿತಿಯಲ್ಲಿ ನಾವು ಇದನ್ನು ಚರ್ಚೆ ಮಾಡದೇಹೋದರೆ ಅದು ಸಾರ್ವಜನಿಕವಾಗಿ ಬಹಳ ತೊಂದರೆಯಾಗುತ್ತದೆ. ಸಾರ್ವಜನಿಕರು ಸಹ ಗಮನಿಸುತ್ತಿದ್ದಾರೆ. ಮೈಸೂರಿನಲ್ಲಿ ನಡೆದಿರುವ ಈ ಘಟನೆ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನಾನು preliminary submission ಮಾಡುತ್ತೇನೆ. ಆಮೇಲೆ ನಿಮಗೆ convince ಆಗುತ್ತದೆಂದು ನಾನು ಅಂದುಕೊಂಡಿದ್ದೇನೆ. ನನಗೆ ವಿಶ್ವಾಸವಿದೆ. ನೀವು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡತ್ತೀರೆಂದು ನನಗೆ ವಿಶ್ವಾಸವಿದೆ.

ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ): ಮೈಸೂರಿನಲ್ಲಿ ಇದು ಇತ್ತೀಚೆಗೆ ನಡೆದ ಘಟನೆಯಾದರೂ ಕಳೆದ 8 ದಿವಸಗಳಿಂದಲೂ ಕೂಡ ಪ್ರಕ್ಷುಬ್ಧವಾದ ವಾತಾವರಣ ಇಂದೂ ಕೂಡ ಮುಂದುವರೆಯುತ್ತಿದೆ. ನಾಗರೀಕರೂ ಯಾರೂ ಕೂಡ ಧೈರ್ಯದಿಂದ ಮೈಸೂರಿನಲ್ಲಿ ಯಾವ ಬೀದಿಯಲ್ಲಿಯೂ ಕೂಡ ಓಡಾಡದಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಪ್ರಪ್ರಥಮವಾಗಿ ಇಂದು ಭೇಟಿಯಾಗುತ್ತಿದ್ದೇವೆ. ಇಂಥ ವಿಚಾರಗಳನ್ನು ನೀವು ನಿಲುವಳಿ ಸೂಚನೆ ಮುಖೇನ ತಂದಾಗ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಾಗ ಅದಕ್ಕೆ ಇನ್ನೂ ಹೆಚ್ಚಿನ ಮಹತ್ವ ಬರುತ್ತದೆ. ಇಲ್ಲಿ ಆಗಿರುವುದೇನೆಂದರೆ ಶಾಂತಿಯನ್ನು ಕದಡದಿರುವಂಥ ವಿಚಾರ. ಕರ್ನಾಟಕ ರಾಜ್ಯ ಬಹಳ ನೆಮ್ಮದಿ, ಶಾಂತಿ, ಸೌಹಾರ್ದತೆಗೆ ಹೆಸರಾಗಿರುವ ರಾಜ್ಯದಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿರುವಂಥ ಇಂತಹ ಪ್ರಕರಣಗಳು ಏಕೆ ಆಗುತ್ತಿವೆ, ಇಂಥ ವಿಚಾರಗಳಲ್ಲಿ ಇಡೀ ವಿಧಾನಸಭೆ ಎಲ್ಲಾ ಕಾರ್ಯ ಕಲಾಪಗಳನ್ನು ಬದಿಗೊತ್ತಿ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರಲ್ಲಾ ಎಂದು ಇಡೀ ರಾಷ್ಟ್ರದಲ್ಲಿ ಎಲ್ಲರೂ ಕುಳಿತು ಚರ್ಚೆ ಮಾಡುವಂಥ ವಿಚಾರವಾಗುತ್ತದೆ. ಆ ಕಾರಣಕ್ಕೋಸ್ಕರ ಇದು ರಾಜ್ಯದ ಒಂದು ಘನತೆ, ಗೌರವವನ್ನು ಕಾಪಾಡುವಂಥ ದೃಷ್ಟಿಯಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಕಳೆದ ಒಂದು ವರ್ಷದಲ್ಲಿ ತಾವು ಅಧಿಕಾರಕ್ಕೆ ಬಂದ ನಂತರ ಅಲ್ಲಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿರುವಂಥ ಈ ಘಟನೆಗಳೇನಿವೆ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು): ಸಭಾಧ್ಯಕ್ಷರೆ, ಅವರು ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ನಿಲುವಳಿ ಸೂಚನೆಗೆ ತಾವು ಅನುಮತಿಯನ್ನು ಕೊಟ್ಟಿರುವ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಏಕೆ ಅನುಮತಿಯನ್ನು ಕೊಡಬೇಕೆಂಬುದಕ್ಕೆ ನಾನು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, ಪ್ರಿಲಿಮನರಿ ಸಬ್‌ಮಿಷನ್‌ಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಈಗ ಅವರು ಅದನ್ನು ಹೊರತುಪಡಿಸಿ ಮಾತನಾಡುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ಕಳೆದ ಒಂದು ವರ್ಷದಲ್ಲಿ ಆಗಿರುವಂಥ ನಿದರ್ಶನಗಳು ಎಷ್ಟಿವೆ ಎಂಬುದನ್ನು ನೋಡೋಣ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, It is a failure of the Ministerial responsibility.

ಶ್ರೀ ಸುರೇಶ್‌ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಅವರು ಇನ್ನೂ ವಿಷಯವನ್ನು ಪ್ರಾರಂಭ ಮಾಡದೆ he has already started charging.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನಾನು ಸಭಾಧ್ಯಕ್ಷರಿಗೆ ಹೇಳುವುದಿಷ್ಟೆ, ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶವನ್ನು ಕೊಟ್ಟಿದ್ದರೆ ಮಾತನಾಡಲಿ.

ಶ್ರೀ ಟಿ.ಬಿ.ಜಯಚಂದ್ರ: ಇವತ್ತು ಅಲ್ಲಿ ಅಲ್ಪಸಂಖ್ಯಾತರು ಭಯದಿಂದ ವಾಸಿಸುವಂಥ ವಾತಾವರಣ ಸೃಷ್ಟಿಯಾಗಿದೆ. ಇದು ಮೈಸೂರಿಗೆ ಸೀಮಿತವಾಗಿರುವ ವಿಚಾರವಲ್ಲ, ಇಡೀ ರಾಜ್ಯಕ್ಕೆ ಸೀಮಿತವಾಗಿರುವ ವಿಚಾರ.

ಶ್ರೀ ಸುರೇಶ್‌ಕುಮಾರ್: ಈಗ ಪ್ರತಿಪಕ್ಷದ ನಾಯಕರು ಏನು ವಿಚಾರವನ್ನುಮಂಡಿಸಿದ್ದಾರೆ ಅದು ಬಹಳ ಮಹತ್ವವಾದ ವಿಚಾರ. ಚರ್ಚೆಯಲ್ಲಿ ನಾವೆಲ್ಲರೂ ಸಹ ಪಾಲ್ಗೊಳ್ಳೋಣ. ಆದರೆ ಇಲ್ಲಿ ಎರಡು ರೀತಿಯಿದೆ ಸಭಾಧ್ಯಕ್ಷರೆ, ಒಂದು ಬೇರೆ ಬೇರೆ ಇಲಾಖೆಗಳ ಅಡಿ ವಿಚಾರ ಚರ್ಚೆಯಾಗುತ್ತಿದ್ದರೆ ಇದನ್ನು ಮಂಡಿಸಬಹುದು, ಬೇಡ, ಇವತ್ತು ಇದರ ಮಹತ್ವನ್ನು ನಾವು ಅರ್ಥ ಮಾಡಿಕೊಂಡು ನಿಯಮ 60ರಡಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೋರುತ್ತಿದ್ದಾರೆ, ಅದರ ಮಹತ್ವವನ್ನು ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೇವೆ. ಇದು ಎಲ್ಲರೂ ಚರ್ಚೆ ಮಾಡಬೇಕಾಗಿರುವಂಥ ವಿಚಾರ. ಈ ಸದನದಿಂದ ಒಂದು ಒಳ್ಳೆಯ ಸಂದೇಶ ಹೋಗಬೇಕು, ಆದರೆ there are any number of ಸಭಾಧ್ಯಕ್ಷರ ರೂಲಿಂಗ್ಸ್ ಇವೆ. Law and Order problem ಯಾವುದೇ Adjournment motion ಗೆ ಒಂದು ಚರ್ಚೆಯ ವಿಷಯವಾಗುವಂಥದ್ದಲ್ಲ. ಈ ಹಿನ್ನೆಲೆಯಲ್ಲಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ, but not under Rule 60, but under Rule 69. ನಾವು ಕೂಡ ಆ ಚರ್ಚೆಯಲ್ಲಿ ಭಾಗವಹಿಸುತ್ತೇವೆ, ಪ್ರಶ್ನೋತ್ತರವಾದ ನಂತರ ಅವರು ಚರ್ಚೆ ಆರಂಭಿಸಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು, ಬಹಳಷ್ಟು ಹಿಂದೆ ತೀರ್ಮಾನಗಳಿವೆ, ರೂಲಿಂಗ್ ಕೊಟ್ಟಿದ್ದೀರಿ, ನಿಯಮ 60 ರಡಿ ಈ ವಿಚಾರ ಬರುವುದೇ ಇಲ್ಲವೆನ್ನುವಂಥ ಮಾತನ್ನು ಹೇಳಿದರು. ಹಿಂದೆ ಇಂಥ ಅನೇಕ ನಿದರ್ಶನಗಳಿವೆ. ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಅನೇಕ ಮಹತ್ವದ ವಿಚಾರಗಳಿದ್ದಾಗಲೂ ಕೂಡ ಇಂಥ ಮಹತ್ವದ ವಿಚಾರ ಬಂದಾಗ, ಕಾನೂನು ಸುವ್ಯವಸ್ಥೆ ವಿಚಾರ ಬಂದಾಗ, ಕೋಮು ಗಲಭೆ ವಿಚಾರ ಬಂದಾಗ ಇವತ್ತು ಇಡೀ ಮೈಸೂರಿನ ಜನರು ತಲ್ಲಣಿಸಿ ಹೋಗಿದ್ದಾರೆ. ಇವತ್ತೂ ಕೂಡ ಕರ್ಫ್ಯೂ ಇದೆ, ಯಾರೊಬ್ಬರು ರಸ್ತೆಯ ಮೇಲೆ ತಿರುಗಾಡುವಂತಿಲ್ಲ, ಅಂಗಡಿಗಳು ಮುಚ್ಚಿವೆ. ಜನ ಭಯಭೀತರಾಗಿದ್ದಾರೆ. ಇವತ್ತು ಕೂಡ ಅನೇಕ ಜನರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಅದರಲ್ಲಿ ಅಪರಾಧಿಗಳು, ನಿರಪರಾಧಿಗಳು ಯಾರ್ಯಾರನ್ನೋ ಅರೆಸ್ಟ್ ಮಾಡಿ ಕರೆದುಕೊಂಡು ಹೋಗುತ್ತಿದ್ದಾರೆ. ಇವತ್ತು ಕೂಡ ಅನೇಕ ಜನರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಅಪರಾಧಿಗಳು ನಿರಪರಾಧಿಗಳು ಯಾರ್ಯಾರನ್ನು ಬೇಕಾದರೂ ಅರೆಸ್ಟ್ ಮಾಡಿ ಕರೆದುಕೊಂಡು ಹೋಗುತ್ತಿದ್ದಾರೆ. ಮೊನ್ನೆ ನೂರಾರು ಜನರನ್ನು ಅರೆಸ್ಟ್ ಮಾಡಿದ್ದಾರೆ.

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ತಕರಾರು ಏನು ಇಲ್ಲ ಎಂದು ಅವರು ಹೇಳಿದ್ದಾರೆ. ಇದು before question hour or after question hour ಎನ್ನುವುದು ವಿಷಯ.

ಶ್ರೀ ಸಿದ್ದರಾಮಯ್ಯ, (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ನಾನು ನಿಮ್ಮಲ್ಲಿ ಮನವಿ ಮಾಡುವುದು ಏನೆಮದರೆ ನಿಯಮ 60ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳಲು ಅವಕಾಶವಿದೆ. ಇದಕ್ಕೆ ರೂಲ್ 60ರಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ರೂಲ್ 60ರಲ್ಲಿ ಮಾಡಬಾರದು ಎನ್ನುವ ಯಾವುದೇ ನಿಖರವಾದ ರೂಲ್‌ಗಳು ಕೂಡ ಇಲ್ಲ. ಈ ತರಹ ಇರುವಾಗ 69ರಲ್ಲಿ ಚರ್ಚೆಗೆ ತೆಗೆದುಕೊಳ್ಳಿ, question hour ಮುಗಿಯಲಿ, convert ಮಾಡಲಿ ಎಂದು argument ಮಾಡತಕ್ಕಂಥಾದ್ದು, ಇದು ಸರ್ಕಾರ ಅವರ ಜವಾಬ್ದಾರಿಯಿಮದ ತಪ್ಪಿಸಿಕೊಳ್ಳುವುದಕ್ಕೆ ಮಾಡತಕ್ಕಂಥ ಪ್ರಯತ್ನ. ಇವತ್ತು ಸರ್ಕಾರ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಪೊಲೀಸ್‌ನವರು ವಿಫಲರಾಗಿದ್ದಾರೆ. ಕಾನೂಮು ಮಂತ್ರಿಯವರು ವಿಫಲರಾಗಿದ್ದಾರೆ. I mean, Home minister ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇವತ್ತು ಇದು ಒಂದೇ incident ಅಲ್ಲ. ನೀವು ಅಧಿಕಾರಕ್ಕೆ ಬಂದಮೇಲೆ ರಾಜ್ಯದ ಅನೇಕ ಭಾಗಗಳಲ್ಲಿ ಇವತ್ತು ಕೋಮುಗಲಭೆಗಳು ನಡೆದಿವೆ. ಇವತ್ತು ಅದನ್ನು ನಿಲ್ಲಿಸತಕ್ಕಂಥ ಯಾವ ಪ್ರಾಮಾಣಿಕ ಪ್ರಯತ್ನವನ್ನೂ ಸರ್ಕಾರ ಮಾಡಿಲ್ಲ. ಇದು ಮೊನ್ನೆ ಜುಲೈ ಎರಡನೇ ತಾರೀಖಿನಂದು ನಡೆದಿರತಕ್ಕಂಥ ಒಂದು ಘಟನೆ, ಇದು ಎರಡನೆಯ ಘಟನೆ, ಅದಕ್ಕಿಂತ ಹಿಂದೆ

ಅಂದರೆ ಏಪ್ರಿಲ್ ಒಂದನೇ ತಾರೀಖು ಘಟನೆ ನಡೆದಿದೆ. ಏಪ್ರಿಲ್ ಎರಡನೇ ತಾರೀಖು, ಮೂರನೇ ತಾರೀಖು ಹಾಗೂ ನಾಲ್ಕನೇ ತಾರೀಖುಗಳಂದು ಕೂಡ ಮೈಸೂರಿನಲ್ಲಿ ಘಟನೆಗಳಾಗಿವೆ. ದಯಮಾಡಿ ಮಧ್ಯದಲ್ಲಿ ಮಂತ್ರಿಗಳು ಎದ್ದು ಮಾತನಾಡುವುದು ಬೇಡ. ಕುಳಿತುಕೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇವರು ಬೆಂಕಿ ಹಚ್ಚುತ್ತಿದ್ದಾರೆ. ಎಲ್ಲಾ ಸರಿಹೋಗಿದೆ. ಬೆಂಕಿ ಹಚ್ಚಲಿಕ್ಕೆ ಕಾರಣಕರ್ತರಾಗುತ್ತಿದ್ದಾರೆ. ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನಿಮಗೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಅನುಮತಿ ಕೊಡುವವರು. ನಿಮ್ಮ ಮನಸ್ಸನ್ನು ಒಪ್ಪಿಸಬೇಕಾಗಿರತಕ್ಕಂಥಾದ್ದು ನಾವು.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: ಸಭಾಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದಾರಾಮಯ್ಯ (ವಿರೋಧ ಪಕ್ಷದ ನಾಯಕರು): ನೀವು permission ಕೊಟ್ಟಿದ್ದೀರಿ. ಆದರೆ, ಈಗ ಅವರು ಪ್ರಶ್ನೆ ಮಾಡಿದರೆ ಹೇಗೆ? How are you questioning? We are trying to convince the Speaker. ಮಾನ್ಯ ಸಭಾಧ್ಯಕ್ಷರೆ, ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಕಾನೂನು ಸಚಿವರು ಏನು ಕೆಲವೊಂದು ಪಾಯಿಂಟ್ಸ್ ರೈಸ್ ಮಾಡಿದ್ದಾರೆ, ಏನು ಇಲ್ಲಿಯವರೆಗೆ ನಡೆದುಕೊಂಡು ಬಂದಂಥ ಪದ್ಧತಿ ಇದೆ, ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, ಪ್ರಾಥಮಿಕವಾಗಿ preliminary ಚರ್ಚೆ ಮಾಡುವುದಕ್ಕೆ ಪೀಠಿಕೆ ಹಾಕುವುದಕ್ಕೆ ನಿಮಗೆ ಅವಕಾಶವಿದೆ. ಆದರೆ, ಈ ಪ್ರಶ್ನೋತ್ತರ ಅವದಿ ಮುಗಿಯಲಿ. ಏಕೆಂದರೆ, ಸಾಕಷ್ಟು ಜನ ಶಾಸಕರು ಇವತ್ತು ಪ್ರಶ್ನೆಗಳನ್ನು ಕೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬಾರದು, ಅದನ್ನು

ಅಡ್ಡಿಪಡಿಸಬೇಕು ಎನ್ನುವ ಉದ್ದೇಶ ನನ್ನದಲ್ಲ. ಸರ್ಕಾರ ಎಲ್ಲಾ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎನ್ನುವುದು ನನ್ನ ಉದ್ದೇಶ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಕಾನೂನು ಸಚಿವರು ಈಗ ಏನೆಂದು ಹೇಳಿದರು ಎಂದರೆ ನಾವು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಇದನ್ನು ಯಾವುದೇ ರೂಪದಲ್ಲಿ ನೀವು ತೆಗೆದುಕೊಂಡರೂ ಅದಕ್ಕೆ ನಾವು ತಯಾರಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆದರೆ, ಪ್ರಶ್ನೋತ್ತರ ವೇಳೆ ಮುಗಿಯಲಿ ಎನ್ನುವ ದೃಷ್ಟಿ ಮಾತ್ರ ಇಲ್ಲಿ ಇದೆ. ಹೀಗಾಗಿ ಪ್ರಶ್ನೋತ್ತರ ಮುಗಿದ ಕೂಡಲೇ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಅದು ಅವರ ಸಲಹೆಯಷ್ಟೆ. ನಿಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ...

ಅಧ್ಯಕ್ಷರು: ಮೊದಲು ಪ್ರಶ್ನೋತ್ತರ ಮುಗಿಯಲಿ ನಂತರ, ನೀವು preliminary submission ಮಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): Preliminary submission ನಾವು ಮಾಡುತ್ತೇವೆ. If you are convinced ನಾವು preliminary submission ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು: preliminary submission ಮಾಡುವುದಕ್ಕೆ ಪ್ರಶ್ನೋತ್ತರದ ನಂತರ ನಾವು ಅವಕಾಶ ಕೊಡುತ್ತೇವೆ. ಪ್ರಶ್ನೋತ್ತರ ಮೊದಲು ಮುಗಿಯಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಇನ್ನೂ ಶುರು ಮಾಡಿಲ್ಲ. ಇವತ್ತು ಅಶಾಂತಿಯನ್ನು ಉಂಟು ಮಾಡಿ ರಾಜಕೀಯವಾಗಿ ಪ್ರೇರೇಪಿಸತಕ್ಕಂತ ಪ್ರಯತ್ನಗಳು ನಡೆದಿವೆ. ಇವತ್ತು ನಾವು ಆದ್ಯತೆ ಮೇಲೆ ಚರ್ಚೆ ಮಾಡದೇ ಹೋದರೆ ಹೇಗೆ? ಇವತ್ತು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಇದು ಇಂತಹ ಪ್ರಮುಖವಾದಂಥ ವಿಚಾರ. ಇಲ್ಲಿ ಚರ್ಚೆಯಾಗುವುದಕ್ಕೆ ಅವಕಾಶ ಸಿಗುತ್ತಿಲ್ಲವೆನ್ನುವುದು ಬಹಳ ಮುಖ್ಯವಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಪ್ರಶ್ನೋತ್ತರ ಮೊದಲು ಮುಗಿಯಲಿ. ನೀವು submission ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ, ಪ್ರಶ್ನೋತ್ತರ ಮೊದಲು ಮುಗಿಯಲಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಅಮೇಲೆ ಪ್ರಶ್ನೋತ್ತರ ಮಾಡೋಣ.

ಅಧ್ಯಕ್ಷರು: ಆಮೇಲೆ ಬರುವುದಿಲ್ಲ. ಇದು Question hour. question hour ಮುಗಿದ ಮೇಲೆ ನೀವೇ submission ಮಾಡಿ. ನಿಮಗೆ ಬೇಕಾದಷ್ಟು ಅವಕಾಶ ಕೊಡುತ್ತೇನೆ. submission ಮಾಡಿ. ಪ್ರಶ್ನೋತ್ತರ ಮುಗಿಯಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): Rule ಇದೆ. ಅದಕ್ಕೋಸ್ಕರ my request is ... ಎಲ್ಲವನ್ನು ಬದಿಗೊತ್ತಿ ಇದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಪ್ರಶ್ನೋತ್ತರ ಬಿಟ್ಟು ಮಾಡಬೇಕೆನ್ನುವುದು ಸರಿಯಲ್ಲ. Ruling ಬೇಕಾದರೆ ನೋಡಿ. ಪ್ರಶ್ನೋತ್ತರಕ್ಕೆ ಮೊದಲು ಅವಕಾಶ ಕೊಡಬೇಕು ಎಂದು ಇದೆ. ಪ್ರಶ್ನೋತ್ತರ ಮೊದಲು ಆಗಬೇಕು. ಎಲ್ಲಾ proceedingsನಲ್ಲೂ ಅದರ proceedings ಇರುತ್ತದೆ.

(ಗೊಂದಲ)

SRI. T.B. Jayachandra:- It is a matter between the Speaker and ourselves. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಸಭಾಧ್ಯಕ್ಷರೆ, ಮೈಸೂರು ಒಂದು ಸಾಂಸ್ಕೃತಿಕವಾದಂಥ ನಗರ. ಇಡೀ ವಿಶ್ವದಲ್ಲೇ ಪ್ರಖ್ಯಾತ ಹೊಂದಿರತಕ್ಕಂಥ ಮೈಸೂರು ನಗರದಲ್ಲಿ, ಇನ್ನು ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ದಸರಾ ಆಚರಣೆಯಲ್ಲಿರುವಂಥ ಸಂದರ್ಭದಲ್ಲಿ, ಇಡೀ ಕರ್ನಾಟಕದಲ್ಲಿ ಹಾಗೂ ವಿಶ್ವದಾದ್ಯಂತದಲ್ಲಿ ಜನರು ಮೈಸೂರಿಗೆ ಯಾವಾಗ ಹೋಗಬೇಕು, ಯಾವತ್ತು ಬರಬೇಕು, ಅಲ್ಲಿ ನಡೆಯತಕ್ಕಂಥ ಮೆರವಣಿಗೆಯನ್ನು ನಾವು ನೋಡಬೇಕು ಹಾಗೂ ಪಾಲ್ಗೊಳ್ಳಬೇಕು ಎನ್ನುವಂತ ಸನ್ನಿವೇಶದಲ್ಲಿ, ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿರುವ ಸಂದರ್ಭದಲ್ಲಿ, ಇದು ರಾಜ್ಯದ prestige ವಿಷಯ ಆಗಿರುವಾಗ, ಇಂತಹ ವಿಚಾರದಲ್ಲಿ ಇಂತಹ ಘಟನೆಯಾದಾಗ . . . . . .

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಅವಕಾಶ ಕೇಳುತ್ತಿದ್ದೇವೆ. ನೀವು ಏಕೆ ಮಾತನಾಡುತ್ತಿದ್ದೀರಿ. ಅಂತಹ ಸಂದರ್ಭದಲ್ಲಿ, ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಹೆಚ್ಚು ಹೆಸರು ಬರತಕ್ಕಂಥಾದ್ದು. ಇವತ್ತು ಕಾನೂನು ಸಚಿವರು ಇವತ್ತು ಹೇಳಿದ್ದೀರಿ. ಅದನ್ನು ನೀವು ಪ್ರಾಸ್ತಾಪಿಕವಾಗಿ ಹೇಳಬೇಕಾಗಿತ್ತು, ಹಾಗೆಯೇ ಹೇಳಿದ್ದೀರಿ. ಇದು ಸರ್ಕಾರದ ಘನತೆಯನ್ನು ಉಳಿಸತಕ್ಕಂಥ ಹಾಗೂ ಹೆಚ್ಚು ಹೆಸರು ಬರತಕ್ಕಂಥ ಅವಕಾಶವಾಗುತ್ತದೆ. ಎಲ್ಲಾ ಕಾರ್ಯಕಲಾಪಗಳನ್ನು ಇವತ್ತು ಬದಿಗಿಟ್ಟು ಇಂತಹ

ವಿಚಾರವನ್ನು ಚರ್ಚೆ ಮಾಡಿದರೆ ಒಳ್ಳೆಯದು. ತಾವು ಹೇಳಿದ್ದೀರಿ. ನಾನು ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸುರೇಶ್ ಕುಮಾರ್(ಕಾನೂನು ಸಚಿವರು): ಮೊದಲು ಪ್ರಶ್ನಾವಳಿ ಆಗಲಿ. ನಾವು ಚರ್ಚೆಗೆ ಸಿದ್ದ ಎಂದು ಈಗಾಗಲೇ ಹೇಳಿದ್ದೇವೆ. ಎಲ್ಲರೂ ಮಾತನಾಡೋಣ. ನಂತರ ಬೆಳಕು ಚೆಲ್ಲೋಣ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ನಾವು ಚರ್ಚೆಗೆ ರೆಡಿ ಇದ್ದೇವೆ. ಯಾವ ಸಂದರ್ಭದಲ್ಲಿ adjournment ತರಬೇಕು ಎನ್ನುವ ವಿಚಾರವನ್ನು ಹೇಳುತ್ತಿದ್ದೇವೆ. ನೀವು ಏಕೆ ಇದಕ್ಕೆ ಅಡ್ಡಿಪಡಿಸುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ, (ವಿರೋಧ ಪಕ್ಷದ ನಾಯಕರು): ಇಲ್ಲಿ ಯಾವುದು ಜರೂರಾಗಿದೆ, ಸಾರ್ವಜನಿಕವಾಗಿ ಮಹತ್ವದ ವಿಚಾರವಾಗಿರುತ್ತದೆ ಅದನ್ನು ರೂಲ್ 60ರ ಅಡಿಯಲ್ಲಿ ತರುವುದಕ್ಕೆ ಅವಕಾಶವಿದೆ. ನಾವು ಅದರ ಅಡಿಯಲ್ಲಿ ತಂದಿದ್ದೀವಿ. ಆದರೆ, ನೀವು ಮಧ್ಯದಲ್ಲಿ ಇದನ್ನು 69ಕ್ಕೆ convert ಮಾಡಿ ಎಂದು ಹೇಳುವುದು ಹಾಗೂ ಈಗ ಬೇಡ question hour ಆದ ಮೇಲೆ ಮಾಡಿ ಎಂದು ಹೇಳುವುದು ಸರಿಯಲ್ಲ. ಆದರೆ, ನಿಮ್ಮ ಸಲಹೆ ಇರಲಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಏನೂ ಆಗಿಲ್ಲ. ಆದರೆ, ಮೈಸೂರಿನಲ್ಲಿ ಮೊನ್ನೆ ನಡೆದಂಥ ಗಲಭೆಯಲ್ಲಿ ಮೂರು ಜನ ಸತ್ತಿದ್ದಾರೆ. ಮಾನ್ಯ ಶಿವಲಿಂಗೇಗೌಡರು ಹೇಳಿದ ಹಾಗೆ ಏನೂ ಆಗಿಲ್ಲ. ಆದರೆ, ಮೈಸೂರಿನಲ್ಲಿ ಮೂರು ಜನ ಸತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಇವತ್ತು ಮೈಸೂರಿನಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಇಲ್ಲೇ ಇದ್ದಾರೆ. ಮೈಸೂರು ನಗರಕ್ಕೆ ಕಳೆದ ಎರಡನೇ ತಾರೀಖಿನಿಂದ ಇವತ್ತಿನವರೆಗೆ ಯಾವ ಜನರೂ ಕೂಡ ಬರುತ್ತಿಲ್ಲ. ಯಾವ ಟೂರಿಸ್ಟ್‌ಗಳು ಬರುತ್ತಿಲ್ಲ. ಮೊದಲು ಮೈಸೂರು ನಗರಕ್ಕೆ ಬೇಕಾದಷ್ಟು ಜನರು ಬರುತ್ತಿದ್ದರು. ಆದರೆ, ಜನರು ಇವತ್ತು ಭಯದ ವಾತಾವಣರಣದಲ್ಲಿದ್ದಾರೆ ಹಾಗೂ ಹೆದರಿಕೆಯಲ್ಲಿದ್ದಾರೆ. ಅಲ್ಲಿನ ಅನೇಕ ಭಾಗಗಳಲ್ಲಿ ಜನ ಇವತ್ತು ಬದುಕುವುದಕ್ಕೆ ಆಗದೇ ಹೊರಗಡೆಗೆ ಗುಳೆ ಹೋಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಇದರ ಬಗ್ಗೆ ಚರ್ಚೆ ಮಾಡಿ ನಾವು ಇದಕ್ಕೆ ಪರಿಹಾರ ಹುಡುಕೋಣ ಎನ್ನುವುದನ್ನು ಬಿಟ್ಟು, ಇಲ್ಲ ಇದನ್ನು ಮುಂದಕ್ಕೆ ಹಾಕಬೇಕು, ಇದನ್ನು ಬೇರೆ ರೂಪದಲ್ಲಿ ಮಾಡೋಣ ಅನ್ನತಕ್ಕಂಥಾದ್ದು ಸರಿಯಾದುದಲ್ಲ. ಇವತ್ತು ಚರ್ಚೆ ಮಾಡೋಣ.

ಅಧ್ಯಕ್ಷರು: ಖಂಡಿತ ಚರ್ಚೆ ಮಾಡೋಣ. ಈಗ ತಾವು ಒಪ್ಪಿಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ ಇದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕು. ಇವತ್ತು ಬೆಂಕಿ ಹತ್ತಿಕೊಂಡು ಉರಿಯುತ್ತಿದೆ. ಇದು ಒಂದೇ ಅಲ್ಲ. ಏಪ್ರಿಲ್‌ನಲ್ಲಿ ಆದಂಥಾದ್ದು ಏಪ್ರಿಲ್‌ನಲ್ಲಿ ಒಂದನೇ ತಾರೀಖು, ಎರಡನೇ ತಾರೀಖು ಹಾಗೂ ಮೂರನೇ ತಾರೀಖುಗಳಂದು ಆದಂಥ ಗಲಭೆಯನ್ನು ಸರಿಯಾದ ರೀತಿಯಲ್ಲಿ ಸರ್ಕಾರ ಹತ್ತಿಕ್ಕಿದ್ದರೆ ಎರಡನೇ ಗಲಭೆ ಆಗುತ್ತಿರಲಿಲ್ಲ ಇವತ್ತು ಎರಡನೇ ಗಲಭೆ ಆಗಿರತಕ್ಕಂಥಾದ್ದನ್ನು ನೋಡಿ. ಮೊದಲನೇ ಗಲಭೆಯಲ್ಲಿಯೇ ಸರ್ಕಾರ ಸಂಪೂರ್ಣ ವಿಫಲವಾಗಿರತಕ್ಕಂಥ ಕಾರಣದಿಂದ ಎರಡನೇ ಗಲಭೆಯಾಗಿರುವುದು. ಆವತ್ತು ಒಬ್ಬರು ಸತ್ತಿದ್ದಾರೆ. ಇವತ್ತು ಮೂರು ಜನ ಸತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಆಸ್ಪತ್ರೆಯಲ್ಲಿ ಸಾವು-ನೋವುಗಳ ಮಧ್ಯೆ ಹೋರಾಟ ಮಾಡುತ್ತಿದ್ದಾರೆ. ಈ ತರಹ ಇರುವಾಗ, ತಾವು ದಯಮಾಡಬೇಕು. ನಾವು ಒತ್ತಾಯ ಮಾಡುತ್ತಿದ್ದೇವೆ. ದಯಮಾಡಿ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಶಂಕರಲಿಂಗೇಗೌಡ: ಚರ್ಚೆ ಬೇಡ ಮೈಸೂರ ಈಗ ಶಾಂತವಾಗಿದೆ. ಇದಕ್ಕೆ ಕಾರಣರು ನೀವೇ ಆಗಿದ್ದೀರಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಇದಕ್ಕೆ ನಾವು ಕಾರಣರಲ್ಲ.

(ಗೊಂದಲ)

ಅಧ್ಯಕ್ಷರು: ಚರ್ಚೆ ಬಂದಾಗ ನಿಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ. please, everybody sit down. ಚರ್ಚೆ ಮಾಡುವುದಕ್ಕೆ ನಿಮಗೂ ಅವಕಾಶ ಕೊಡುತ್ತೇವೆ. ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಶಂಕರಲಿಂಗೇಗೌಡರೇ ಚರ್ಚೆ ಬಂದಾಗ ನಿಮಗೂ ಅವಕಾಶ ಕೊಡುತ್ತೇನೆ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾತನಾಡುವುದಕ್ಕೆ ಅವಕಾಶವಿದೆ. ನೀವು ಮಾತನಾಡಿ ಆಮೇಲೆ.

(ಗೊಂದಲ)

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ (ಬೃಹತ್ ನೀರಾವರಿ ಸಚಿವರು): ಮೈಸೂರಿನಲ್ಲಿ ನಡೆದಿರತಕ್ಕಂಥ ಘಟನೆ ಬಗ್ಗೆ ಸತ್ಯಾಂಶ ಹೊರಬರಬೇಕು. ನಮ್ಮ ಸರ್ಕಾರ ನೀವು ಕೇಳುವಂಥ ಎಲ್ಲಾ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲು

ಸಿದ್ದವಿದೆ. ಅದರಲ್ಲಿ ಎರಡನೇ ಮಾತಿಲ್ಲ. (ಗೊಂದಲ) ನೀವು ಹೇಳಿದರೆ ಆಗುವುದಿಲ್ಲ. ನೀವು ಬೇಕಾದ್ದನ್ನು ಹೇಳುತ್ತೀರಿ. ನೀವು ಹೇಳಿದರೆ ಆಗುವುದಿಲ್ಲ. (ಗೊಂದಲ) ನಿಮ್ಮ certificate ನಮಗೆ ಬೇಕಾಗಿಲ್ಲ. ನೀವು ಹೇಳಿದರೆ ಆಗುವುದಿಲ್ಲ. ನೀವು ಮನಸೋ ಇಚ್ಛೆ ಮಾತನಾಡುತ್ತೀರಿ. ಅದನ್ನೆಲ್ಲಾ ನಡೆಸುವುದಕ್ಕೆ ಆಗುವುದಿಲ್ಲ. ನೀವು ಹೇಳಿದ್ದನ್ನೆಲ್ಲಾ ಕೇಳುವುದಕ್ಕಾಗುವುದಿಲ್ಲ.

(ಗೊಂದಲ)

ಬಿ.ಎಸ್.ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿದ್ದರಾಮಯ್ಯನವರು ಹಾಗೂ ಮಾನ್ಯ ಜಯಚಂದ್ರರವರು ಇಬ್ಬರೂ ಆಡಳಿತ ಪಕ್ಷದಲ್ಲಿದ್ದರು. ಈಗ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಕೆಲಸ ಮಾಡಿದ ಅನುಭವ ಅವರಿಗಿದೆ. ನಾವೇ ಮಾಡಿಕೊಂಡಿರುವಂಥ ಕರ್ನಾಟಕ ವಿಧಾನಸಭೆ ಕಾರ್ಯಕಲಾಪದ ನಿಯಮಾವಳಿಗಳು ಏನಿದೆ ಇದಕ್ಕೆ ನಾವೆಲ್ಲರೂ ಬದ್ಧರಿದ್ದೇವೆಂದು ನಾನು ತಿಳಿದುಕೊಂಡಿದ್ದೇನೆ. ನಾವು ನಮ್ಮ ಪ್ರತಿಪಕ್ಷದ ನಾಯಕರಿಗೆ ಹೇಳುತ್ತಿರುವುದೇನೆಂದರೆ, ಈ ಚರ್ಚೆಗೆ ನೀವು ಅವಕಾಶ ಕೊಟ್ಟಮೇಲೆ ಅದನ್ನು ಚರ್ಚೆಮಾಡುವುದಕ್ಕೆ ನಾವು ಸಿದ್ದರಿದ್ದೇವೆ, ಯಾರು ಸಹ ಇದನ್ನು ವಿರೋಧ ಮಾಡುತ್ತಿಲ್ಲ. ಆದರೆ, ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಲುವಳಿ ಸೂಚನೆ ತರುವುದಕ್ಕೆ ಅನುಮತಿ ಕೇಳಿದ ಮೇಲೆ ಅಧ್ಯಕ್ಷರು 60ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆ ಎಂದು ಅಭಿಪ್ರಾಯ ಪಟ್ಟರೆ, ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರೆ ವಿಷಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯರನ್ನು ಕರೆಯಬೇಕು. ಅಂತಹ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದು ನಿಂತು ಸದರಿ ನಿಲುವಳಿ ಸೂಚನೆ ತರುವುದಕ್ಕೆ ಅನುಮತಿ ಕೊಡಬೇಕು. ನನ್ನ point ಇಷ್ಟೇ ನೀವು ಅಧ್ಯಕ್ಷರಾಗಿ ಅಲ್ಲಿ ಕುಳಿತುಕೊಂಡಿದ್ದಿರಿ, ಕಾನೂನಿನಲ್ಲಿ ನಮ್ಮದೇ ಆದಂಥ ನಿಯಮಗಳನ್ನು ಮಾಡಿಕೊಂಡಿದ್ದೇವೆ. ನಿಮ್ಮ ಅನುಮತಿ ಕೊಡುವುದಕ್ಕಿಂತ ಮುಂಚೆ ನಾವು ಎದ್ದುಕೊಂಡು ಆರೋಪ ಮಾಡುವುದಕ್ಕೆ ಶುರು ಮಾಡಿದರೆ ಎಷ್ಟರಮಟ್ಟಿಗೆ ಸರಿಯಿದೇ? ಈ ನಿಯಮಾವಳಿಗಳು ಎಲ್ಲರಿಗೂ ಅನ್ವಯವಾಗುತ್ತದೆ ಅಲ್ಲವೇ? ಕರ್ಫ್ಯೂ ಇದೆ ಎಂದು ಹೇಳಿಬಿಟ್ಟರು, ರೆಕಾರ್ಡ್‌ಗೆ ಹೋಗುತ್ತದೆ. ಮಾನ್ಯ ಸಿದ್ದರಾಮಯ್ಯನವರಿಗೆ ಕರ್ಫ್ಯೂ ಇದೆ ಎಂದು ಯಾರು ಹೇಳಿದರು? you are representing that mysore constituency. ಇಂಥವರು ಅಲ್ಲಿ ಇದ್ದುಕೊಂಡು ಪ್ರತಿಪಕ್ಷದ ನಾಯಕರಾಗಿ ಮೊದಲನೇ ದಿವಸವೇ, ಅಲ್ಲಿರುವ ಶಾಂತ ವಾತಾವರಣವನ್ನು ಕದಡುವಂಥ ಪ್ರಯತ್ನವನ್ನು ನಾವು ನೀವು ಯಾರು ಮಾಡಬಾರದು. ಎಲ್ಲಿದೇ ಕರ್ಫ್ಯೂ? ಈ ನಿಯಮಾವಳಿಗಳನ್ನು ಬಿಟ್ಟು ಏನೂ

ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಅನುಮತಿ ಕೊಡುತ್ತೀರಾ? we have no objection. ಇದುವರೆಗೂ ನಡೆದುಕೊಂಡು ಬಂದಿರುವ ಸತ್ಸಂಪ್ರದಾಯಕ್ಕೆ ತಿಲಾಂಜಲಿ ಇಡುವಂಥ ಕೆಲಸ ಪ್ರತಿಪಕ್ಷದ ನಾಯಕರು ಮಾಡಬಾರದು, ನಾವೂ ಮಾಡಬಾರದು. ನೀವು ಒಂದು ಬಾರಿ ಅನುಮತಿ ಕೊಟ್ಟಮೇಲೆ, ಯಾರ್ಯಾರ ಕಾಲದಲ್ಲಿ ಏನೇನು ಆಯಿತು, ಏನೇನು ಘಟನಾವಳಿಗಳಾಗಿದೆ ಎಂದು ದಿವಸವೂ ಚರ್ಚೆಯಾಗಲಿ ನಾವು ಉತ್ತರ ಕೊಡಲಿಕ್ಕೆ ಸಿದ್ದರಿದ್ದೆವೆ. ಆ ಘಟನೆ ನಡೆದ ತಕ್ಷಣ ಮಾನ್ಯ ಗೃಹಸಚಿವರು ಅಲ್ಲಿಗೆ ಹೋಗಿದ್ದರು. ಅಲ್ಲಿನ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಡಿ.ಜಿ ಅವರು ಅಲ್ಲಿ ಎರಡು ದಿವಸ ಇದ್ದರು. ನಾವು ಏನೇನು ಮಾಡಬೇಕೋ ಅದನ್ನು ಮಾಡಿದ್ದೇವೆ. ನಾನು ವಿವರಕ್ಕೆ ಹೋಗುವುದಿಲ್ಲ. ಉತ್ತರ ಕೊಡುವ ಸಂದರ್ಭ ಬಂದಾಗ ಉತ್ತರವನ್ನು ಕೊಡುತ್ತೇನೆ. ಮಾನ್ಯ ಗೃಹಸಚಿವರು ಇಲ್ಲಿದ್ದಾರೆ. ಅವರು ಉತ್ತರವನ್ನು ಕೊಡಲು ಸಮರ್ಥರಿದ್ದಾರೆ, ಉತ್ತರವನ್ನು ಕೊಡುತ್ತಾರೆ. ಆದರೆ, ನೀವು ಅನುಮತಿ ಕೊಡುವುದಕ್ಕಿಂತ ಮುಂಚೆ ಈ ರೀತಿ ಆರೋಪ ಮಾಡುವಂಥಾದ್ದು, ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು, ಇದು ಎಷ್ಟರಮಟ್ಟಿಗೆ ಸರಿಯೆಂದು ತಾವು ತೀರ್ಮಾನವನ್ನು ತೆಗೆದುಕೊಂಡ ಮೇಲೆ, ಚರ್ಚೆಗೆ ತಾವು ಅವಕಾಶ ಮಾಡಿಕೊಡಿ. we have no objection.

ಶ್ರೀ ಡಿ.ಕೆ.ಶಿವಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ಒಂದು Adjournment motion move ಮಾಡುವಾಗ, ನಮ್ಮ ರಕ್ಷಣೆಗೆ ನೀವು ಬರದೇ ನಿಮ್ಮನ್ನು ನಾವು convince ಮಾಡದೇ, ಇನ್ನೇನು ಅವರನ್ನು convince ಮಾಡುವುದಕ್ಕಾಗುತ್ತದೆಯೇ ಅಧ್ಯಕ್ಷರೆ? So ಅದು ಏನಾಗಿದೆ? ಇದು ಏನು? ಅದಕ್ಕೆ ಪೂರಕವಾಗಿ ಇಲ್ಲಿ ಏನೇನು ಚರ್ಚೆ ಮಾಡಿದ್ದೇವೆ ಅದನ್ನು ಮಂಡಿಸಬೇಕಾದರೆ, ಈ ರೀತಿ ಸತ್ಯಾಂಶವಿದೆ ಎಂದು ಹೇಳಿದಾಗ ಮಾತ್ರ ತಾವು ಚರ್ಚೆಗೆ ಅನುಮತಿ ಕೊಡುವುದು. ಅದರಲ್ಲಿ ಏನು ನಡೆದಿದೆ ಎಂಬುದನ್ನು ನಾವೂ ಸ್ವಲ್ಪ ಸೇರಿಸಬೇಕಾಗುತ್ತದೆ. ನೀವು ಏನು ನಡೆದಿದೆ ಎಂದು ಹೇಳದೆಯೇ ಹಾಗೆಯೇ permission ಕೊಡಿ ಎಂದು ಹೇಳಿದರೆ, ಅವರು ಹೇಗೆ permission ಕೊಡುತ್ತಾರೆ? ಎದ್ದು ನಿಂತೇ ಮಾತನಾಡಬೇಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋದಪಕ್ಷದ ನಾಯಕರು): ಮೊದಲನೆ ಬಾರಿಗೆ ವಿರೋಧಪಕ್ಷದ ನಾಯಕರಾಗಿ ಬಂದು ಇಲ್ಲಿ ಹೊಸ ಸಂಪ್ರದಾಯ ಮಾಡುವುದಕ್ಕೆ ಬದಲು ಕೆಟ್ಟ ಸಂಪ್ರದಾಯ ಮಾಡುವುದಕ್ಕೆ ಹೊರಟಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಯಮ 60ರ ಅಡಿಯಲ್ಲಿ ನೀವು ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕೋರಿದ ಮೇಲೆ, ಅಧ್ಯಕ್ಷರು 60ರ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯಗಳು

ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯ ಪಟ್ಟರೆ, ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರೆ ವಿಷಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸದಸ್ಯರ ಹೆಸರನ್ನು ಕರೆಯಬೇಕು. ನಿಮ್ಮನ್ನು ಮನವೋಲಿಸಲು ಪ್ರಯತ್ನ ಮಾಡುತ್ತಿದ್ದಾಗಲೇ, ಎಲ್ಲಾ ಮಾನ್ಯ ಮಂತ್ರಿಗಳು ಜವಾಬ್ದಾರಿ ಇರತಕ್ಕಂಥದವರು, ಅವರು ಮಧ್ಯೆ ಎದ್ದುನಿಂತುಕೊಂಡು ನೀವು preliminary submission ಅನ್ನೇ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ರೀತಿಯಲ್ಲಿ ವಾದ ಮಾಡತಕ್ಕಂಥಾದ್ದು ಇದೆಯಲ್ಲಾ, ಇದು Parliamentary system of practice ಗೆ ವಿರುದ್ಧ ಆಗುವಂತಹ ವಿಚಾರ. ಮಾನ್ಯ ಮುಖ್ಯಮಂತ್ರಿಗಳಾಗಿರುವಂಥ ಯಡಿಯೂರಪ್ಪನವರು ನೀವು ಕೂಡ ವಿರೋಧಪಕ್ಷದಲ್ಲಿದವರು, ಇಂತಹ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಿಮ್ಮ ಮುಖ ಕೆಂಪಾಗುತ್ತಿದ್ದುದ್ದನ್ನು ನಾವು ಕುಳಿತುಕೊಂಡು ನೋಡುತ್ತಿದ್ದೆವು.

ಶ್ರೀ ಡಿ.ಕೆ.ಶಿವಕುಮಾರ್ (ಕನಕಪುರ): ನೀವು ಇಲ್ಲಿ ಇದ್ದು ಮಾತನಾಡುವಾಗ ಏನು ಎಲ್ಲವೂ ಹಾರುತ್ತಿತ್ತು! ಏನು ಆ ಗಲಾಟೆ, ಆ ರೋಷ, ಆ ಕೋಪ! ನೀವೂ ಮತ್ತು ಈಶ್ವರಪ್ಪನವರು ಇಬ್ಬರೂ ಇಲ್ಲಿ ಸೇರಿಕೊಂಡು ಮಾಡುತ್ತಿದ್ದೀರಿ? ಮಾನ್ಯ ಸುರೇಶ್ ಕುಮಾರ್ ಅವರು ಇಲ್ಲಿದ್ದರು. ಒಂದೊಂದು ವಿಚಾರಗಳಲ್ಲಿ ಏನೇನು ಗಲಾಟೆ ಮಾಡಿದ್ದಿರಿ? ಏನೇನು ಮಾಡಿದ್ದೀರಿ ಎನ್ನುವ ನಿಮ್ಮ ದಾಖಲೆಗಳನ್ನು ತೆಗೆಯಿರಿ ಗೊತ್ತಾಗುತ್ತದೆ. ಕೂತುಕೊಂಡು ಇಲ್ಲಿ ವಾರಗಟ್ಟಲೆ ಎಷ್ಟು ಮಾತನಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ: ಏನೇನು ಗಲಾಟೆ ಮಾಡಿದ್ದೀರಿ. ಇವರು ಮಾತನಾಡಿರುವುದನ್ನು ಒಂದು ಸಾರಿ ನೋಡಿಕೊಂಡರೆ, ಬಹುಶ: ಹೀಗೆಲ್ಲಾ ನೀವು ಮಾತನಾಡುವುದಿಲ್ಲ.

ಶ್ರೀ ರಾಮಚಂದ್ರಗೌಡ: ನೀವೆಲ್ಲಾ ಯಡಿಯೂರಪ್ಪನವರ followers ಆದರೆ, ಇಲ್ಲೇ ಬಂದುಬಿಡಿ. ಮತ್ತೆ ಅಲ್ಲಿ ಏಕೆ ಕುಳಿತುಕೊಂಡಿದ್ದೀರಾ?

ಶ್ರೀ ಸಿದ್ದರಾಮಯ್ಯ: ಎರಡನೇ ತಾರೀಖು ಬೆಳಗ್ಗೆ 6 ಘಂಟೆಗೆ ಈ ಘಟನೆಯು ನಡೆದಿದೆ. ಗೃಹ ಸಚಿವರು ತಕ್ಷಣ ಹೋದರು ಎಂದು ಹೇಳಿದ್ದಾರೆ. ನಿವೇನೋ ಇರಲಿಲ್ಲ. ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಚೆನ್ನೈಗೆ ಹೋಗಿದ್ದೀರಿ. ನೀವು ಊರಿನಲ್ಲಿರಲಿಲ್ಲ. ಗೃಹ ಸಚಿವರು ಇದ್ದರು. ಇವರು 4ನೇ ತಾರೀಖು ಮಧ್ಯಾಹ್ನದ ಮೇಲೆ ಬಂದಿದ್ದಾರೆ.

ಅಧ್ಯಕ್ಷರು: ಮಾನ್ಯ ಸಿದ್ದಾರಾಮಯ್ಯನವರೆ, detail ಆಗಿ ಚರ್ಚೆ ಮಾಡೋಣ ಆಮೇಲೆ.

ಶ್ರೀ ಸಿದ್ದರಾಮಯ್ಯ: Detail ಅಲ್ಲ, Home Minister ಅವರು ತಕ್ಷಣ ಹೋದರು, ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಅದಕ್ಕೆ ನೀವೇನು ಹೇಳುತ್ತೀರಿ, ಸರ್ಕಾರದ ಉತ್ತರವನ್ನು ಕೇಳೋಣ. ಮಾನ್ಯ ಸುರೇಶ್ ಕುಮಾರ್‌ಅವರು, ಮಾನ್ಯ ಮುಖ್ಯಮಂತ್ರಿಗಳೂ ಇದನ್ನು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿರುವುದರಿಂದ, ಆ ರೀತಿ ಅಲ್ಲಿ ತಪ್ಪು ಮಾಹಿತಿ ಕೊಡಬಾರದು. ಇವತ್ತು ಕೂಡ ಪ್ರಕ್ಷುಬ್ಧ ಪರಿಸ್ಥಿತಿ ಇದೆ. ಶಾಂತ ಪರಿಸ್ಥಿತಿಗೆ ಬರುತ್ತಿದೆ. ಈಗಲೂ ಅನೇಕ ಏರಿಯಾಗಳಲ್ಲಿ ಗೌಶಿಯಾ ನಗರ, ಶಾಂತಿ ನಗರ, ಉದಯಗಿರಿ ಈ ವ್ಯಾಪ್ತಿಗಳಲ್ಲಿ ಇವತ್ತೂ ಕೂಡ ಪ್ರಕ್ಷುಬ್ಧ ವಾತಾವರಣವಿದೆ.

ಅಧ್ಯಕ್ಷರು: Home Minister ಆಗಿನಿಂದಲೂ request ಮಾಡುತ್ತಿದ್ದಾರೆ. ಅವರ ಮಾತನ್ನು ಕೇಳೋಣ.

ಶ್ರೀ ಸಿದ್ದರಾಮಯ್ಯ: ನಾನು ಮುಗಿಸಿದ ಮೇಲೆ ಮಾತನಾಡಲಿ. ಒಂದು ನಿಮಿಷ, ಇವರು ಬಂದಿದ್ದು 4ನೇ ತಾರೀಖು. ನಾವು 3ನೇ ತಾರೀಖಿಗೆ ಹೋಗಿದ್ದೆವು. ನೀವು ಯಾರೂ ಕೂಡ ಒಳಗೆ ಬರಬಾರದು, ನೋಡಬಾರದು, ಅದು ಇನ್ನೂ clear-up ಆಗುತ್ತದೆ ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಆದ್ದರಿಂದ ನಾವು ಹೋಗಲೇ ಇಲ್ಲ just we have followed. ನಾವು ವಿರೋಧಪಕ್ಷದ ನಾಯಕರಾಗಿರುವುದರಿಂದ ಅಲ್ಲಿನ ಜನರಿಗೆ ಏನೇನಾಗಿದೆ ಎಂದು ನೋಡುವುದಕ್ಕೆ, ಅವರ ಕಷ್ಟಸುಖಗಳನ್ನು ಕೇಳೋಣವೆಂದರೂ ಅವರು ಅವಕಾಶ ಕೊಡಲಿಲ್ಲ. ನಾವೂ ಕೂಡ ಅವರ ಮಾತನ್ನು ಕೇಳಿಕೊಂಡು ಒಳಗೆ ಹೋಗಲಿಲ್ಲ. ಇವರು 4 ತಾರೀಖು ಬಂದಿದ್ದಾರೆ. Incident ಪ್ರಾರಂಭವಾದದ್ದು 2ನೇ ತಾರೀಖು ಬೆಳಗ್ಗೆ 6 ಗಂಟೆಗೆ. ಅಲ್ಲಿವರೆಗೂ ಇವರು ಬಂದೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಊರಿನಲ್ಲೇ ಇರಲಿಲ್ಲ. ಜಿಲ್ಲಾ ಮಂತ್ರಿಗಳಂತೂ ಅಮೆರಿಕಾ ಪ್ರವಾಸದಲ್ಲಿದ್ದರು. ಅವರು ಬಂದು, KFD ಅವರೇ ಇದಕ್ಕೆ ಕಾರಣವೆಂದು ನಿನ್ನೆ statement ಮಾಡಿದ್ದಾರೆ. ಈ ತರಹ ಇರುವಾಗ ನೀವು ಇಂತಹ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ಚರ್ಚೆ ಮಾಡಲಿಕ್ಕೆ ಅವರಿಂದ ಏನೂ objection ಇಲ್ಲ.

ಡಾ. ವಿ.ಎಸ್.ಆಚಾರ್ಯ(ಗೃಹ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಈ ವಿಷಯದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಿಗಾಗಲಿ ಅಥವಾ ಇತರ ಸನ್ಮಾನ್ಯ ಸದಸ್ಯರಿಗಾಗಲೀ ಯಾವುದೇ ವಿಷಯವನ್ನು ಹೇಳಲಿಕ್ಕೆ ನಾನು ಸಿದ್ದನಿದ್ದೇನೆ. 2ನೇ ತಾರೀಖು ನಡೆದಂಥ ಘಟನಾವಳಿಯಿಂದ ಈ ಕ್ಷಣದವರೆಗೂ ನಾನು ಮೈಸೂರಿನ

ಘಟನಾವಳಿಯ ಬಗ್ಗೆ ಪ್ರತಿ ಒಂದೊಂದು ಗಂಟೆಗೊಮ್ಮೆ ವಿವರವನ್ನು ತರಿಸುತ್ತಿದ್ದೇನೆ. ಅದರ ಸಂಪೂರ್ಣ ಮಾಹಿತಿ ನನ್ನ ಹತ್ತಿರ ಇದೆ. ಯಾವುದನ್ನೂ ಮುಚ್ಚಿಡುವಂಥ ಪ್ರಶ್ನೆಯೇ ಇಲ್ಲ. 2 ಮತ್ತು 3ನೇ ತಾರೀಖು ಸ್ವಲ್ಪಮಟ್ಟಿಗೆ ಪ್ರಕ್ಷುಬ್ಧತೆ ಇದ್ದುದ್ದು ಹೌದು ಮತ್ತು ರಾತ್ರಿ 2 ದಿವಸ ಕರ್ಫ್ಯೂ ಹೇರಿದ್ದೂ ಹೌದು. ಆದರೆ, ಈಗ 5 ದಿವಸದಿಂದ ಪರಿಸ್ಥಿತಿ ಶಾಂತವಾಗಿದೆ. ಶಾಂತತೆಯತ್ತ ಹೋಗುತ್ತಿದೆ. ಸಂಪೂರ್ಣ ನಿಯಂತ್ರಣದಲ್ಲಿದೆ. ಹಾಗಾಗಿ, ಏನು ಹೇಳಬೇಕೋ ಆಮೇಲೆ ಸಂದರ್ಭ ಬಂದಾಗ ಹೇಳೋಣ. ಇವತ್ತು ಪರಿಸ್ಥಿತಿ ಶಾಂತವಾಗಿದೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಒಂದು ವಿಷಯದ ಬಗ್ಗೆ ಮಾತ್ರ ನಾನು ನನ್ನ ಗಮನಹರಿಸುತ್ತೇನೆ. ನಾನು 2ನೇ ತಾರೀಖಿಗೇ ಅಲ್ಲಿ ಹೋಗಬೇಕೆಂದು ಇದ್ದೆ. ಆದರೆ ನಿಮಗೆ ಯಾವ ರೀತಿ ಹೇಳಿದರು ಅದೇ ರೀತಿ ಅಲ್ಲಿ ಸ್ವಲ್ಪ ಪ್ರಕ್ಷುಬ್ಧತೆ ಇದೆ. ಅಲ್ಲಿ ನೀವು ಯಾರಾದರೂ ಹೋದರೆ, ನಮ್ಮ ಗಮನ ಬೇರೆ ಕಡೆ ಸೆಳೆಯುವ ಹಾಗೆ ಆಗಬಾರದು, VIP Members ಬಂದರೆ ಆ ಕಡೆ ಗಮನ ಹರಿಸಬೇಕಾಗುತ್ತದೆ ಎಂದು ನಮಗೂ ಹೇಳಿದರು.

ಶ್ರೀ ಡಿ.ಕೆ.ಶಿವಕುಮಾರ್: Reply ಆಗಿದೆಯೇ?

ಶ್ರೀ ವಿ.ಎಸ್.ಆಚಾರ್ಯ: ಇದು ಕೇಂದ್ರ ಸರ್ಕಾರದಿಂದ ಬಂದಿರುವ ಸುತ್ತೋಲೆಯಲ್ಲಿದೆ. ಪ್ರಕ್ಷುಬ್ಧ ವಾತಾವರಣ ಇರುವಾಗ VIPಯಂತಹ ನಾಯಕರುಗಳು ಹೋದಾಗ ಪೊಲೀಸರ ಕಾರ್ಯಕಲಾಪಗಳಿಗೆ ತೊಂದರೆಯಾಗುತ್ತದೆ.

1-00 PM

ಶ್ರೀ ಕೆ.ಎಸ್.ಈಶ್ವರಪ್ಪ: ಇವರು ಮಾತ್ರ ಎಲ್ಲವನ್ನೂ ಪ್ರಸ್ತಾಪ ಮಾಡಬಹುದು. ಆದರೆ ಉತ್ತರವನ್ನು ಮಾತ್ರ ಕೊಡಲು ಬಿಡುವುದಿಲ್ಲ. ಇದು ಯಾವ ಸೀಮೆಯ ವಿರೋಧ ಪಕ್ಷವೋ ನನಗಂತೂ ಅರ್ಥವಾಗುವುದಿಲ್ಲ. ನೀವು ಮಾತ್ರ ಎಲ್ಲವನ್ನೂ ಪ್ರಸ್ತಾಪ ಮಾಡಬಹುದು. ಅದರೆ ನಮಗೆ ಉತ್ತರ ಕೊಡಲು ಬಿಡುವುದಿಲ್ಲ. ಇದು ವಿರೋಧ ಪಕ್ಷದ ವ್ಯವಸ್ಥೆಯೇ?

ಶ್ರೀ ಸಿದ್ದರಾಮಯ್ಯ: ಸರ್ಕಾರ ಇರೋದೇ ಉತ್ತರ ಕೊಡಲು.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಹೊಸದಾಗಿ ವಿರೋಧ ಪಕ್ಷದ ನಾಯಕರಾಗಿದ್ದೀರಿ. ನಿಮ್ಮ ಪೌರುಷವನ್ನು ತೋರಿಸುತ್ತೀದ್ದೀರಿ. ನೀವು ತೋರಿಸಿ ಬೇಡವೆಂದು ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನಾವು ಪೌರುಷವನ್ನು ತೋರಿಸಲು ಬಂದಿಲ್ಲ. ಪೌರುಷವನ್ನು ಎಲ್ಲಿ ತೋರಿಸಬೇಕೋ ಅಲ್ಲಿ ತೋರಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ತಾವು ಪೌರುಷವನ್ನು ತೋರಿಸಲು ಹೊರಟರೆ ನಮಗೂ ಉತ್ತರ ಕೊಡಲು ಶಕ್ತಿ ಇದೆ.

ಶ್ರೀ ಸಿದ್ದರಾಮಯ್ಯ: ಉತ್ತರ ಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಮಗೆ ಮಾತನಾಡಲೇ ಬಿಡುವುದಿಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ: ಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಕೊಡುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ: ಮೊದಲು ನಮಗೆ ಚರ್ಚೆ ಮಾಡಲು ಅವಕಾಶ ಕೊಡಿ. ಅನಂತರ ಎಷ್ಟುಬೇಕಾದರು ಕೊಡಿ. you have every right to reply.

ಶ್ರೀ ಕೆ.ಎಸ್. ಈಶ್ವರಪ್ಪ: ಸಭಾಧ್ಯಕ್ಷರು ತಮಗೆ ಮಾತನಾಡಲು ಅವಕಾಶ ಕೊಟ್ಟರೆ ತಾವು ಎಷ್ಟು ಬೇಕಾದರೂ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಅದಕ್ಕಾಗಿಯೇ ಕೇಳುತ್ತಿದ್ದೇವೆ. Now we are requesting.

ಶ್ರೀ ಕೆ.ಎಸ್. ಈಶ್ವರಪ್ಪ: ಕೇಳಿ ಆಯಿತಲ್ಲಾ? ತಾವು ಪ್ರಸ್ತಾಪ ಮಾಡಿದ ಮೇಲೆ ಅವರು ಹೇಳುತ್ತಿದ್ದಾರೆ. ಅದಕ್ಕೂ ತಾವು ಬಿಡುತ್ತಿಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ:- we are requesting the Hon'ble Speaker. ನಾವು ನಿಮ್ಮನ್ನು, ಅವರನ್ನು, ಇವರನ್ನಲ್ಲಾ ಕೇಳುವುದು.

ಶ್ರೀ ಕೆ.ಎಸ್. ಈಶ್ವರಪ್ಪ: ಇದನ್ನು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿಯೆಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಆದರೂ ತಾವು ಮತ್ತೆ ಮತ್ತೆ ಇದನ್ನು ಬಿಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ನಮ್ಮ ಮನವಿ ನಿಮಗೆ ಮಾನ್ಯ ಅಧ್ಯಕ್ಷರೇ, ನೀವು ನಮ್ಮ ರಕ್ಷಣೆಗೆ ಬರಬೇಕು. ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಬೇಕಾದವರು ನೀವು. ನೀವು ನಮಗೆ ರಕ್ಷಣೆ ಕೊಡಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಇದನ್ನು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿಯೆಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಅದಕ್ಕೂ ತಾವು ಬಿಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ನಾವು ನಿಮ್ಮ ಜೊತೆ ತಕರಾರೇ ಇಲ್ಲ. ನಿಮ್ಮ ಜೊತೆ ಚರ್ಚೆಯೇ ಇಲ್ಲ. ನಾವು ಅವರ ಜೊತೆ argument ಮಾಡುತ್ತಿರುವುದು. Our argument is with the Speaker, not with you, not with any other member. Our argument is only with you have to protect our interest.

ಶ್ರೀ ಕೆ.ಎಸ್. ಈಶ್ವರಪ್ಪ: ಪ್ರಸ್ತಾಪದಲ್ಲೇ ಗೃಹ ಸಚಿವರು failure ಎಂದು ವಿರೋಧ ಪಕ್ಷದ ನಾಯಕರಾಗಿ ಹೇಳಿಬಿಟ್ಟರು.

SRI SIDDARAMAIAH:- ಹೌದು. The Government has failed. The Government has failed 100%. I will substantiate my statement, how the Government has failed.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಪ್ರಾರಂಭದಲ್ಲೇ ಗೃಹ ಸಚಿವರು failure ಎಂದು ಹೇಳಿಬಿಟ್ಟರೆ ಇವರೂ ವಿರೋಧ ಪಕ್ಷದ ನಾಯಕರಾಗಿ failure ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ತಾವು power ಬಗ್ಗೆ ಉತ್ತರ ಕೊಡುವಿರಂತೆ ಇದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಗೃಹಸಚಿವರು failure ಎಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ: ಹೌದು.

ಶ್ರೀ ಕೆ.ಎಸ್.ಈಶ್ವರಪ್ಪ: ಹಾಗಾದರೆ ನೀವು ವಿರೋಧ ಪಕ್ಷದ ನಾಯಕರಾಗಿ failure ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

SRI SIDDARAMAIAH:- I am arguing with him. I am arguing only with the speaker.

ಅಧ್ಯಕ್ಷರು: ಸಿದ್ದರಾಮಯ್ಯನವರೇ, ಜಯಚಂದ್ರರವರೇ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ರೀತಿ ಕೂಗಾಡುವುದರಿಂದ ವಿರೋಧ ಪಕ್ಷದವರ ಬಾಯಿಯನ್ನು ಮುಚ್ಚಿಸಲು ಸಾಧ್ಯವಾಗುವುದಿಲ್ಲ. ಸರ್ಕಾರದವರು ಬಹಳ ದೊಡ್ಡ ಧ್ವನಿಯನ್ನು ಮಾಡಿದರೆ ನಮ್ಮ ಬಾಯಿಯನ್ನು ಮುಚ್ಚಿಸಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವರು ಮಧ್ಯೆ ಮಧ್ಯೆ ಎದ್ದು ಅಡ್ಡಬರತಕ್ಕದ್ದು, ಸರ್ಕಾರ failure ಆಗಿದೆ ಎನ್ನತಕ್ಕದನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್: ನೀವು submission ಮಾಡುವುದಕ್ಕೇ ಬಿಡುವುದಿಲ್ಲವಲ್ಲಾ? ಮೊದಲು ಇವರು ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಸಿದ್ದುಸವದಿಯವರೆ, ನೆಹರು ಓಲೇಕಾರ್‌ರವರೆ, ಶಂಕರಲಿಂಗೇಗೌಡರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿ ನಮಗೆಲ್ಲರಿಗೂ ಅನ್ವಯವಾಗುತ್ತದೆ, ಅದರ ಅಡಿಯಲ್ಲಿ ನಾವೆಲ್ಲರೂ ಕೆಲಸ ಮಾಡಬೇಕೆಂದು ಸಭಾನಾಯಕರು ಹೇಳಿದರು. ಅದನ್ನು ನಾವು ಒಪ್ಪುತ್ತೇವೆ. ಆದರೆ, ವಿಶೇಷವಾದಂಥ ಸಂದರ್ಭಗಳಲ್ಲಿ ಎಲ್ಲಾ ನಿಯಮಾವಳಿಗಳನ್ನು ಬದಿಗೊತ್ತಿ ಇರುವ ವಿಷಯವನ್ನು ಚರ್ಚೆ ಮಾಡಬೇಕು ಎಂಬುದು ನಮ್ಮ ಸಂಸದೀಯ ವ್ಯವಸ್ಥೆಯಲ್ಲಿದೆ. ಇದೇ ಸಭೆಯಲ್ಲಿ ಈ ರೀತಿಯದ್ದು ಸಾಕಷ್ಟು ಸಲ ಚರ್ಚೆಯಾಗಿದೆ. ಹೋದ ಅಧಿವೇಶನದಲ್ಲೂ ಈ ರೀತಿಯದ್ದಕ್ಕೆ ಮಾನ್ಯ ಸಭಾನಾಯಕರು ಅವಕಾಶ ಮಾಡಿಕೊಟ್ಟಿದ್ದರು. ಅಂಥಹದ್ದೇ ಒಂದು ಸಂದರ್ಭ ಇವತ್ತು ಆಗಿದೆ ಎಂಬ ವಿಚಾರದಲ್ಲಿ ತಮ್ಮ ಗಮನವನ್ನು ಸೆಳೆಯಲು ಹೊರಟಾಗ ಮಾನ್ಯ ಸುರೇಶ್‌ಕುಮಾರ್‌ರವರು ಸರ್ಕಾರದ ನಿಯಮಾವಳಿಯನ್ನು ಹೇಳಿದ್ದಾರೆ. ಆದರೆ, ನೀವು ಏನೂ ಸಬ್‌ಮೀಷನ್ ಮಾಡುವುದೇ ಬೇಡ ಎಂದರೆ ಹೇಗೆ? ನಾವು ಎಲ್ಲವನ್ನೂ ಹೇಳುವುದಕ್ಕೆ ಹೋಗುತ್ತಿಲ್ಲ. ಇದೊಂದು ವಿಶೇಷವಾದ ಸಂಧರ್ಭ, ಕರ್ನಾಟಕದ ಹಿತದೃಷ್ಟಿ ಅಡಗಿದೆ, ಇಡೀ ವಿಶ್ವದ ಜನರು ನೋಡುತ್ತಿದ್ದಾರೆ, ಇದರಿಂದ ಹೆಚ್ಚು ಹೆಸರು ಬರತಕ್ಕದ್ದು ಸರ್ಕಾರಕ್ಕೆ, ರಾಜ್ಯದ ಹಿತದೃಷ್ಟಿಯಿಂದ ಇವತ್ತು ನಿಯಮಾವಳಿಯನ್ನು ಬದಿಗಿಟ್ಟು ಚರ್ಚೆಗೆ ಅವಕಾಶ ಕೊಡಿಯೆಂದು ಕೇಳಿದರೆ, ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೇನು ನಿಲುವಳಿ ಸೂಚನೆಯ ಬಗ್ಗೆ, ಕಾನೂನು ಸುವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ನಮ್ಮ ಯಾರದ್ದೂ ತಕರಾರು ಇಲ್ಲವೆಂದು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ ಕಾನೂನು ಸಚಿವರೂ ಹೇಳಿದ್ದಾರೆ. ಚರ್ಚೆ ಮಾಡುವುದಕ್ಕೆ ತಾವು ತಯಾರಿಲ್ಲವೆಂಬ ಮಾತನ್ನು ಅವರುಗಳು ಹೇಳಿಯೇ ಇಲ್ಲ. ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಈ ನಿಲುವಳಿ ಸೂಚನೆಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಇದು ಕಾನೂನು ಸುವ್ಯವಸ್ಥೆಗೆ ಮಾತ್ರ ಸೀಮಿತವಾಗಿಲ್ಲ. ಇದು ಮಂತ್ರಿಮಂಡಲದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅದನ್ನು ನಿಲುವಳಿ ಸೂಚನೆಯಲ್ಲಿ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ತಾವು ಈ ವಿಷಯದ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಇದ್ದೇ ಇದೆ. ಆದರೆ, ಇದನ್ನು ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಇದೆ. ಮೊದಲು ಪ್ರಶ್ನೋತ್ತರ ಮುಗಿಯಬೇಕು. ಅನಂತರ ನೀವು ಇದರ ಬಗ್ಗೆ ಚರ್ಚೆ ಮಾಡುವಿರಂತೆ ಆದ್ದರಿಂದ ನಿಲುವಳಿ ಸೂಚನೆಯ ಬಗ್ಗೆ ನೀವೇನು preliminary submission ಪ್ರಾರಂಭ ಮಾಡಿದ್ದೀರಿ ಅದರ ಬಗ್ಗೆ ಪ್ರಶ್ನೋತ್ತರ ಮುಗಿದ ಮೇಲೆ ಅವಕಾಶ ಕೊಡುತ್ತೇನೆ. ಆಗ ನೀವು ವಿವರವಾಗಿ ಮಾತನಾಡಲು ಅವಕಾಶ ಇದೆ. ಸರ್ಕಾರದವರೂ ಉತ್ತರ ಕೊಡುತ್ತಾರೆ. ಆದರೆ ನಾವು ಇದರಲ್ಲೇ ಸಮಯವನ್ನು ಹಾಳು ಮಾಡುತ್ತಿದ್ದೇವೆ. ನಮ್ಮ ಸಮಯ ಇದಕ್ಕಾಗಿಯೇ ಹೋಗುತ್ತಿದೆ. ಆದ್ದರಿಂದ ನಾವು ಇಂದಿನ subject ಗೆ ಬರೋಣ. ನಿಮಗೆ ಅವಕಾಶ ಕೊಡುತ್ತೇನೆ. ಆಗ ನೀವು ಏನೇನು ವಿಷಯವಿದೆ ಅವೆಲ್ಲವನ್ನೂ ಚರ್ಚೆ ಮಾಡಿ. ಅದಕ್ಕೆ ಉತ್ತರವನ್ನು ಕೊಡಲು ಅವರೂ ತಯಾರಿದ್ದಾರೆ. ಅದ್ದರಿಂದ ಮೊದಲು ಪ್ರಶ್ನೋತ್ತರ ಮುಗಿಯಲಿ. ಅನಂತರ we will continue this subject.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಸಭಾಧ್ಯಕ್ಷರು ಒಂದು ಸಲ ರೂಲಿಂಗ್ ಕೊಟ್ಟಮೇಲೆ ಅದನ್ನು ಪಾಲಿಸುವುದು ಕರ್ತವ್ಯ. ಹಕ್ಕು ಮತ್ತು ಕರ್ತವ್ಯ ಒಟ್ಟಿಗೇ ಹೋಗುತ್ತದೆ. ಪ್ರಶ್ನೋತ್ತರ ಆಗಲಿ ಅನಂತರ ತೆಗೆದುಕೊಳ್ಳುವುದಾಗಿ ಮಾನ್ಯ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಸರ್ಕಾರವೂ ಅದಕ್ಕೆ ಉತ್ತರ ಕೊಡುತ್ತದೆ.

ಶ್ರೀ ಸಿದ್ದರಾಮಯ್ಯ: ಅವರೇನು ರೂಲಿಂಗ್ ಕೊಟ್ಟಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಹಾಗಾದರೆ ಇನ್ನೇನು? ರೂಲಿಂಗ್ ಬಗ್ಗೆ ಏನಾದರೂ ಸ್ವರೂಪ ಇದೆಯೇ?

SRI SIDDARAMAIAH:- It is not a ruling. Don't consider it as ruling.

ಶ್ರೀ ಎಸ್. ಸುರೇಶ್‌ಕುಮಾರ್: ಇದು ರೂಲಿಂಗ್ ಅಲ್ಲವೆ ಎಂದು ಸಭಾಧ್ಯಕ್ಷರನ್ನೇ ಕೇಳಿ.

ಶ್ರೀ ಸಿದ್ದರಾಮಯ್ಯ: ನೀವು ಸಲಹೆ ಕೊಡುತ್ತಿದ್ದೀರಷ್ಟೆ.

ಅಧ್ಯಕ್ಷರು: ಸಲಹೆ ಕೊಡುವುದು, ಇಲ್ಲಿ ಹೇಳುವಂಥದ್ದು ಸಭಾಧ್ಯಕ್ಷರ ರೂಲಿಂಗೇ ಆಗಿರುತ್ತದೆ.

ಶ್ರೀ ಸಿದ್ದರಾಮಯ್ಯ: ಇದು ಸಲಹೆ.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಕೊಡುವುದು ಮಾತ್ರ ಸಲಹೆ, ನೀವು ಕೊಡುವುದು ಮಾತ್ರ ತೀರ್ಮಾನ!

SRI SIDDARAMAIAH:- No I have no right to give judgment.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. Let us not sit on prestige.

SRI SIDDARAMAIAH:- you are sitting on the prestige.

ಶ್ರೀ ಎಸ್. ಸುರೇಶ್‌ಕುಮಾರ್: ಪ್ರಶ್ನೋತ್ತರ ಆಗಲಿ ಅನಂತರ ಚರ್ಚೆ ಪ್ರಾರಂಭ ಮಾಡೋಣವೆಂದು ಮಾನ್ಯ ಸಭಾಧ್ಯಕ್ಷರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಅವರು ಉತ್ತರ ಕೊಡಲು ತಯಾರಿದ್ದಾರೆ...

ಅಧ್ಯಕ್ಷರು: ಪ್ರಶ್ನೋತ್ತರ ಆದ ತಕ್ಷಣವೇ ಇದನ್ನು ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ಈ ರೀತಿ ಸಂಪ್ರದಾಯಗಳು ಈ ಹಿಂದೆ ಬೇಕಾದಷ್ಟು ಆಗಿದೆ.

ಅಧ್ಯಕ್ಷರು: ಪ್ರಶ್ನೋತ್ತರ ಆದ ತಕ್ಷಣವೇ ಇದನ್ನು ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ನಾವು ಇಲ್ಲಿ ತಂದಿರತಕ್ಕದ್ದು ಬಹಳ ಮಹತ್ತರವಾದ, ಜರೂರಾದ ಮತ್ತು ಇತ್ತೀಚೆಗೆ ನಡೆದಿರುವ ಘಟನೆ. ಈಗಲೂ ಪ್ರಕ್ಷುಬ್ಧ ವಾತಾವರಣ ಮೈಸೂರು ನಗರದಲ್ಲಿರುವುದರಿಂದ ಇದು ಅತ್ಯಂತ ಅವಶ್ಯ. ಪ್ರಶ್ನೋತ್ತರವನ್ನು ಬದಿಗೊತ್ತಿ. ಮಾನ್ಯ ಸದಸ್ಯರು ಪ್ರಶ್ನೆ ಕೇಳಬಾರದು ಅವರು ಉತ್ತರ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ಅವರು ತೀರ್ಮ ಕೊಟ್ಟಿದ್ದಾರೆಂದು ನಾನು ಹೇಳಿಲ್ಲ. ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳಿಯೆಂದು ಹೇಳಿದ್ದಾರೆ. ನಮ್ಮ ಮನವಿ ಏನೆಂದರೆ, ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ, urgent matter ಆಗಿರುವುದರಿಂದ ಪ್ರಶ್ನೋತ್ತರಕ್ಕಿಂತ ಮೊದಲೇ ಇದಕ್ಕೆ ಅವಕಾಶ ಕೊಡಬೇಕು. ಪದೇ ಪದೇ ತೀರ್ಮ ಕೊಟ್ಟ ಮೇಲೂ ಸಹ ಮನವಿ ಮಾಡಲು ಅವಕಾಶ ಇದೆ.

(ಗೊಂದಲ)

ಅಧ್ಯಕ್ಷರು:– ನಾನು ಈಗ ತೀರ್ಪನ್ನು ಕೊಟ್ಟೇ ಬಿಡುತ್ತೇನೆ ಬಿಡಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ತಾವು ತೀರ್ಮ ಕೊಟ್ಟ ಮೇಲೂ ಸಹ ಅದನ್ನು ಪುನ: ಪರಿಶೀಲಿಸಲು ನಾವು ನಿಮಗೆ ಮನವಿ ಮಾಡಿಕೊಳ್ಳಬಹುದು. ಆದರೆ ತಮ್ಮ ತೀರ್ಪನ್ನು ಪ್ರಶ್ನೆ ಮಾಡುವಂತಿಲ್ಲ. ಮನವಿಯನ್ನು ಯಾವ ಕಾಲದಲ್ಲೂ ಸಹ ಮಾಡಬಹುದು.

ಡಾ: ಹೆಚ್.ಸಿ.ಮಹಾದೇವಪ್ಪ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇತ್ತು, ಕರ್ಫ್ಯೂ ಹಾಕಲಾಗಿತ್ತು ಎಂಬುದನ್ನು ಮಾನ್ಯ ಗೃಹ ಸಚಿವರೇ admit ಮಾಡಿಕೊಂಡಿದ್ದಾರೆ.

ಅಧ್ಯಕ್ಷರು:– ಅದೆಲ್ಲವನ್ನೂ detail ಆಗಿ ಚರ್ಚೆ ಮಾಡುವಾಗ ಹೇಳುವಿರಂತೆ. ಈಗ ಅದನ್ನೆಲ್ಲಾ ಹೇಳುವುದು ಬೇಡ.

ಡಾ: ಹೆಚ್.ಸಿ.ಮಹಾದೇವಪ್ಪ:– Time and again such incidents are occurring at that particular place of mysore. ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇತ್ತು, ಅಲ್ಲಿ ಕರ್ಫ್ಯೂ ಹಾಕಿದ್ದೆವು ಎಂಬುದನ್ನು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಜನ ಅಲ್ಲಿ ತುಂಬಾ ಭಯಭೀತರಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಇವತ್ತೇನು ...

(ಗೊಂದಲ)

ಶ್ರೀ ತನ್ವೀರ್ ಸೇಠ್:– ಮಾನ್ಯ ಅಧ್ಯಕ್ಷರೆ, ನಿಯಮ 62ರ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ಈಚೆಗೆ ನಡೆದಂತಹ ಘಟನೆಯಾಗಿರಬೇಕು ಎಂದು ಇದೆ. ನಾವು ಪ್ರಸ್ತಾಪಿಸುತ್ತಿರುವುದು ಈಚೆಗೆ ನಡೆದ ಘಟನೆಯೇ ಆಗಿದೆ. ಅದು ಅಲ್ಲಿ ಇನ್ನೂ ಮುಂದುವರೆಯುತ್ತಿದೆ. ಇದು ಬಹಳ ಪ್ರಸ್ತುತವಾಗಿರುವಂತಹ ವಿಷಯವಾಗಿದೆ. ಮಾನ್ಯ ಗೃಹ ಸಚಿವರು ಅಲ್ಲಿ ಕಳೆದ ಐದು ದಿನಗಳಿಂದ ಶಾಂತಿ ಇದೆ ಎಂದು ಹೇಳುತ್ತಿದ್ದಾರೆ. ಪೋಲೀಸ್ ಇಲಾಖೆಯವರು 13ನೇ ತಾರೀಖಿನವರೆಗೂ ನಿಷೇದಾಜ್ಞೆಯನ್ನು ಜಾರಿಗೊಳಿಸಿದ್ದಾರೆ. ರಾತ್ರಿ ವೇಳೆಯಲ್ಲಿ ಇವತ್ತಿಗೂ ಕರ್ಫ್ಯೂವನ್ನು ಮುಂದುವರೆಸಿದ್ದಾರೆ. ಅಲ್ಲಿ ಅಮಾಯಕರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಸುಮಾರು 25 ಮಂದಿ ಇವತ್ತು ಅಲ್ಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಭಯದ ವಾತಾವರಣ ಅಲ್ಲಿದೆ. ರಾಜ್ಯ ಸರ್ಕಾರ ಇವತ್ತು ಜನತೆಯ ವಿಶ್ವಾಸವನ್ನು ಪಡೆದುಕೊಳ್ಳಬೇಕಾದರೆ, ಇದೊಂದು ಅತ್ಯಂತ ಜರೂರಾದಂತಹ ವಿಷಯವಾಗಿರುವುದರಿಂದ, ಸದನದ ಮೂಲಕ ಉತ್ತಮವಾದಂತಹ ಸಂದೇಶ ಹೋಗಬೇಕಾಗುತ್ತದೆ. ಇದರಲ್ಲಿ ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎಂಬ ಭಾವನೆಗಳನ್ನು ದೂರ ಮಾಡಿ, ಜನತೆಯ ವಿಶ್ವಾಸವನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಇವತ್ತು ಈ ಸರ್ಕಾರ ಮಾಡಬೇಕಾಗಿರುವುದರಿಂದ...

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಅಲ್ಲಿ ಗಲಾಟೆಗೆ ನೀವೇ ಕಾರಣರು.

(ಗೊಂದಲ)

ಅಧ್ಯಕ್ಷರು:– ಅವರು ಏನೋ ಮಾತನಾಡುತ್ತಿದ್ದಾರೆ. ಮಾನ್ಯ ಶಂಕರಲಿಂಗೇಗೌಡರೆ, please ಕುಳಿತುಕೊಳ್ಳಿ. ಮಾನ್ಯ ಕಟ್ಟಾ ನಾಯ್ಡುರವರೆ, ತಾವೂ ಸಹ ದಯವಿಟ್ಟು ಕುಳಿತುಕೊಳ್ಳಿ. ಎಲ್ಲರೂ ಪದೇ ಪದೇ ಎದ್ದು ನಿಲ್ಲಬೇಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವುದನ್ನು ತಾವು ದಯವಿಟ್ಟು ಕಡತದಿಂದ ತೆಗೆಸಬೇಕು. ವಿನಾಕಾರಣ ಅವರ ಮೇಲೇ ಆರೋಪ ಮಾಡಿದ್ದಾರೆ.

ಅಧ್ಯಕ್ಷರು: – ಅವರು ಮಾತನಾಡಿರುವುದು ಆಕ್ಷೇಪಾರ್ಹವಾಗಿರುವಂತಾದ್ದು ಇದ್ದರೆ, ಅದನ್ನು ನಾನು ನೋಡಿ ಕಡತದಿಂದ ತೆಗೆದು ಹಾಕಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಶಂಕರಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ತನ್ವೀರ್ ಸೇಠ್‌ರವರು ಆ ಕ್ಷೇತ್ರದ ಶಾಸಕರು...

(ಗೊಂದಲ)

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರು senior member ಆಗಿದ್ದಾರೆ. ದಯವಿಟ್ಟು ಅವರಿಗೆ ಕುಳಿತುಕೊಳ್ಳಲು ಹೇಳಿ.

ಅಧ್ಯಕ್ಷರು:– ಮಾನ್ಯ ಶ್ರೀನಿವಾಸ್‌ರವರೆ, ನಾನು ನಿಮಗೆ ಮಾತನಾಡಲು ನಂತರ ಅವಕಾಶ ಮಾಡಿಕೊಡುತ್ತೇನೆ. ಈಗ ನಿಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಆದುದರಿಂದ ದಯವಿಟ್ಟು ತಾವು ಕುಳಿತುಕೊಳ್ಳಿ. ನಾನು ಅವಕಾಶ ಕೊಟ್ಟಾಗ ನೀವು ಮಾತನಾಡುವಿರಂತೆ. senior member ಆಗಿರುವ ಈ ರೀತಿ ಮಾಡನಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: – ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ನೀವು ಮಾತನಾಡುವುದು ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ತನ್ವೀರ್ ಸೇಠ್‌ರವರು ಆ ಕ್ಷೇತ್ರದ ಶಾಸಕರಾಗಿದ್ದಾರೆ. ಅವರು ಮಾತನಾಡುತ್ತಿರುವಾಗ ಅಡ್ಡಿ ಪಡಿಸಬಾರದು. ಆ ಕ್ಷೇತ್ರದಲ್ಲಿ ಪ್ರತಿನಿತ್ಯ ಏನು ನಡೆಯುತ್ತಿದೆಯೋ, ಅದನ್ನು ಅವರು ಅನುಭವಿಸುತ್ತಿದ್ದಾರೆ.

ಅವರಿಗೆ ಅಲ್ಲಿನ ಘಟನೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅಲ್ಲಿ ಇವತ್ತೇನು ನಡೆಯುತ್ತಿದೆ ಎಂಬುದರ ಮಾಹಿತಿ ಕೂಡ ಅವರಲ್ಲಿದೆ. ಅವರು ಅಲ್ಲಿಯ ಪ್ರತಿನಿಧಿಯಾಗಿದ್ದಾರೆ. ಅವರಿಗೆ ಅವರ ಕ್ಷೇತ್ರದಲ್ಲಿ ಇರತಕ್ಕಂಥ ತೊಂದರೆಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡದೇ, ಮಾನ್ಯ ಶಂಕರಲಿಂಗೇಗೌಡರು.....

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅವರು ಆ ಕ್ಷೇತ್ರಕ್ಕೆ ಸಂಬಂಧಪಟ್ಟವರಲ್ಲ. ಅವರು ನೇರವಾಗಿ....

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಅವರು ಮತ್ತು ಮಾನ್ಯ ಶಂಕರಲಿಂಗೇಗೌಡರು ಇಬ್ಬರು ಸಹ ಮೈಸೂರನ್ನು represent ಮಾಡುತ್ತಿದ್ದಾರೆ. ಚರ್ಚೆಯಲ್ಲಿ ಇಬ್ಬರಿಗೂ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಅಕ್ಷೇಪಾರ್ಹವಾಗಿರುವಂತಹ ಹೇಳಿಕೆಯನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

[ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು]

(ಗೊಂದಲ)

ಅಧ್ಯಕ್ಷರು:– ಮಾನ್ಯ ಶಂಕರಲಿಂಗೇಗೌಡರು ಮಾನ್ಯ ತನ್ವೀರ್ ಸೇಠ್‌ರವರ ಬಗ್ಗೆ ಏನೊಂದು ಹೇಳಿಕೆಯೊಂದನ್ನು ಕೊಟ್ಟಿದ್ದಾರೋ, ಆ ಹೇಳಿಕೆ ಆಕ್ಷೇಪಾರ್ಹವಾದುದಾಗಿದೆ. ಆ ಹೇಳಿಕೆಯನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಅವರ ಹೇಳಿಕೆಯನ್ನು ಕಡತದಿಂದ ತೆಗೆದು ಹಾಕಿದ್ದೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ತನ್ವೀರ್ ಸೇಠ್ ಅವರು ಮಾತನಾಡುವಾಗ, ಶಂಕರಲಿಂಗೇ ಗೌಡರು ಒಬ್ಬ ಜವಾಬ್ದಾರಿಯುತ ಶಾಸಕರಾಗಿದ್ದರೆಂದು ನಾನು ತಿಳಿದುಕೊಂಡಿದ್ದೇನೆ, 4 ಸಾರಿ ಗೆದ್ದು ಬಂದಿದ್ದಾರೆ. 1ನೇ ಏಪ್ರಿಲ್ ರಂದು ರಾಮದಾಸ್ ಸೇರಿದಂತೆ ಅವರೆಲ್ಲಾ ಸ್ನೇಹಿತರೆಲ್ಲಾ ಅಲ್ಲಿ ಹೋಗಿ, ಜನರನ್ನು ಎತ್ತುಕಟ್ಟಿ ಪ್ರಚೋದನೆ ಮಾಡದೆ ಹೋಗದೆ ಇದ್ದಿದ್ದರೆ ಈ ಎರಡನೆ incident ಆಗುತ್ತಿರಲಿಲ್ಲ. ಮದ್ಯದಲ್ಲಿ ಮುತಾಲಿಕ್ ಮತ್ತು ಅವರ ರಾಜ್ ಸೇನೆ, ಅವರೆಲ್ಲಾ ಹೋಗದೆ ಇದ್ದಿದ್ದರೆ ಈ ಘಟನೆ ಆಗುತ್ತಿರಲಿಲ್ಲ. ಇದಕ್ಕೆ ಯಾರು

ಜವಾಬ್ದಾರರು ಎಂಬುದನ್ನು ಮುಚ್ಚುಕೊಳ್ಳುವುದಕ್ಕೋಸ್ಕರ, ಯಾರು ಜವಾಬ್ದಾರರಾಗಿದ್ದಾರೆ ಅವರನ್ನು ಇವತ್ತು ಪತ್ತೆಹಚ್ಚುತ್ತಾರೆನ್ನುವ ಕಾರಣಕೋಸ್ಕರ ತನ್ವೀರ್ ಸೇಠ್ ಅವರ ಮೇಲೆ ನೇರವಾಗಿ ಆರೋಪ ಮಾಡುವುದು. ಮಾನ್ಯ ಶಂಕರಲಿಂಗೇಗೌಡರು ಇವತ್ತು ಅವರ ಗೌರವಕ್ಕೆ ತಕ್ಕಂತೆ ಇವತ್ತು ನಡೆದುಕೊಂಡಿಲ್ಲ, ಅವರ ಹೇಳಿಕೆ ಕೊಟ್ಟ ಮೇಲೆ ಸಾಬೀತು ಮಾಡಬೇಕು. ಇಲ್ಲದೆ ಹೋದರೆ ಇವರು ಈ ಸದನಕ್ಕೆ unconditional apology ಕೇಳಬೇಕು.

ಅಧ್ಯಕ್ಷರು: ಈಗ ಶಂಕರಲಿಂಗೇ ಗೌಡರು ಏನು ಅಕ್ಷೇಪಾರ್ಹವಾದ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಕಡತದಿಂದ ತೆಗೆದುಹಾಕಲಾಗಿದೆ, I deleted. ದಯವಿಟ್ಟು ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಗೋವಿಂದ ಕಾರಜೋಳ[ಸಣ್ಣ ನೀರಾವರಿ ಸಚಿವರು]: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷ ನಾಯಕರು, ಶಂಕರಲಿಂಗೇ ಗೌಡರು, ರಾಮದಾಸ್ ಅವರು ಹೋಗಿ ಪ್ರಚೋದನೆ ಮಾಡಿದ್ದರಿಂದ ಎರಡನೆ ಸಾರಿ ಘಟನೆಯಾಯಿತು ಎಂದು ಹೇಳಿದರು, ಅದನ್ನು ಕಡತದಿಂದ ತೆಗೆದುಹಾಕಬೇಕು, ಆ ವಿಚಾರ ಸರಿಯಲ್ಲ, ವಿರೋಧಪಕ್ಷದ ನಾಯಕರು ಆ ರೀತಿ ಆರೋಪ ಮಾಡುವುದು ಸಭ್ಯತೆಯಲ್ಲ, ನೀವು ಮಾತನಾಡಲು ಇನ್ನು ಪರವಾನಿಗೆಯನ್ನೇ ಕೊಟ್ಟಿಲ್ಲ ಈ ರೀತಿ ಆರೋಪ ಮಾಡಿದ್ದನ್ನು ಕಡತದಿಂದ ತೆಗೆಯಬೇಕು. ಇಲ್ಲದಿದ್ದರೆ, ಶಂಕರಲಿಂಗೇ ಗೌಡರು ಏನು ಹೇಳಿದ್ದಾರೆ ಅದು ಕೂಡ ಕಡತದಲ್ಲಿ ಇರಲಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಇಬ್ಬರ ಮೇಲೆ ಆರೋಪ ಮಾಡಿದ್ದರೆ, ಅವರು unconditional apology ಮಾಡಬೆಕು. ಇಲ್ಲದಿದ್ದರೆ ಅವರನ್ನು suspensionನಲ್ಲಿಡಬೇಕು, ಅವಕಾಶವಿದೆ ಇಲ್ಲದಿದ್ದರೆ ಇದನ್ನು ಪ್ರೂವ್ ಮಾಡಬೇಕು.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ಪುನ: ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನ 1 ಗಂಟೆ 23 ನಿಮಿಷಕ್ಕೆ ಮುಂದೂಡಲಾಯಿತು]

4–00 ಘಂಟೆ

(ಸದನವು ಸದನವು ಸಂಜೆ 4 ಗಂಟೆ 10 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಬೆಳಗ್ಗೆ ನಿಲುವಳಿ ಸೂಚನೆ ತಂದಂಥ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆದಂಥ

KCS-10-09-8

ಘಟನೆಯ ಬಗ್ಗೆ ನಾನು ನಿಮ್ಮ ಮನವೊಲಿಸುವಾಗ ಪ್ರಿಲಿಮಿನರಿ ಸಬ್‌ಮಿಷನ್ ಮಂಡಿಸುವ ಸಂದರ್ಭದಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಮಂಡಿಸಲಿಕ್ಕೆ ಇಲ್ಲಿ ಅನೇಕ ಜನರು ಅಡ್ಡಿ ಮಾಡತಕ್ಕಂಥ ಪ್ರಯತ್ನ ಮಾಡಿದರು. ಇತ್ತೀಚೆಗೆ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರಲಿ, ಅಥವಾ ಬೇರೆ ಯಾರಾದರೂ ಹಿರಿಯ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹಳ ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುವುದು, ಅದರಲ್ಲೂ ವಿಶೇಷವಾಗಿ ಮಂತ್ರಿಗಳು, ಅವರು ಎದ್ದು ನಿಂತು ಅಡ್ಡಿಪಡಿಸತಕ್ಕಂಥ ಪ್ರಯತ್ನಗಳನ್ನು ಮಾಡತಕ್ಕಂಥದ್ದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ತಾವು ಇಲ್ಲಿ ನನ್ನ ಹಕ್ಕಿನ ರಕ್ಷಣೆಯಾಗಿರಬಹುದು, ಎಲ್ಲಾ ಮಾನ್ಯ ಸದಸ್ಯರ ಹಕ್ಕಿನ ರಕ್ಷಣೆಯಾಗಿರಬಹುದು, ನಮ್ಮ ಹಕ್ಕನ್ನು ರಕ್ಷಣೆ ಮಾಡತಕ್ಕಂಥದ್ದು ತಮ್ಮ ಜವಾಬ್ದಾರಿ. ಯಾರೇ ಆಗಲಿ ವೈಯಕ್ತಿಕವಾಗಿ ನಿಂದನೆಗಳನ್ನು ಮಾಡುವುದಾಗಲಿ, ಬೇಸ್‌ಲೆಸ್ ಆಗಿ ಆರೋಪಗಳನ್ನು ಮಾಡವುದಾಗಲಿ, ಉದ್ದೇಶಪೂರ್ವಕವಾಗಿ ಆರೋಪಗಳನ್ನು ಮಾಡುವುದಾಗಲಿ, ಆಧಾರರಹಿತವಾಗಿ ಮಾತನಾಡುವುದು, ಬೇಜವಾಬ್ದಾರಿಯಿಂದ ಮಾತನಾಡುವುದು, ಈ ಸದನಕ್ಕೆ ಶೋಭೆ ತರುವ ವಿಚಾರ ಅಲ್ಲ. ಮತ್ತು ಅದು ಒಳ್ಳೆಯ ಸಂಪ್ರದಾಯ ಕೂಡ ಆಗುವುದಿಲ್ಲ. ಈ ಸದನದಲ್ಲಿ ಅನೇಕ ವರ್ಷಗಳಿಂದ ನಮ್ಮ ಹಿಂದಿನ ಎಲ್ಲಾ ಮಾನ್ಯ ಸದಸ್ಯರೆಲ್ಲರೂ ಬಹಳ ಒಳ್ಳೆಯ ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದೇವೆ. ನಿಮ್ಮ ಕಾಲದಲ್ಲೂ ಕೂಡ ಒಳ್ಳೆಯ ಸಂಪ್ರದಾಯ ಮುಂದುವರಿಯತಕ್ಕಂಥದ್ದು ಆಗಬೇಕು. ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಎಲ್ಲರಿಗೂ ಇಲ್ಲಿ ಮಾತನಾಡಲಿಕ್ಕೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಕ್ಕೆ ಹಕ್ಕಿದೆ. ಆ ಹಕ್ಕನ್ನು ರಕ್ಷಣೆ ಮಾಡುವುದು ತಮ್ಮ ಜವಾಬ್ದಾರಿ ಎಂದು ನಾನು ಬಾವಿಸಿಕೊಂಡಿದ್ದೇನೆ. ಮುಂದಿನ ಸಾಲಿನಲ್ಲಿರುವ ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡುವುದೇನೆಂದರೆ, ಈ ಸದನದಲ್ಲಿ ಕನಿಷ್ಟ ಪಕ್ಷ ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ಮಾತನಾಡುವುದಕ್ಕೆ ಪ್ರಾರಂಭಿಸಿದಾಗ ಸದಸ್ಯರು ಹೇಗೆ ನಡೆದುಕೊಳ್ಳಬೇಕು ಬಹುಶ: ತಮಗೆಲ್ಲರಿಗೂ ಗೊತ್ತಿದೆ ಎಂದು ಭಾವಿಸುತ್ತೇನೆ. ತಾವು ಕೂಡ ಇಲ್ಲಿ ಐದು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಆಚಾರ್ಯರವರು ಕೂಡ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದಾರೆ. ನಾವು ಇಲ್ಲಿ ಒಳ್ಳೆಯ ಸಂಪ್ರದಾಯಗಳನ್ನು ಸ್ಥಾಪನೆ ಮಾಡಿದ್ದೇವೆ ಆ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವುದು ಬಹಳ ಅತ್ಯಂತ ಅವಶ್ಯ. ತಮ್ಮ ರೂಲ್ಸ್‌ಗಳಲ್ಲೂ ಕೂಡ ಯಾರ ಮೇಲಾದರೂ ವೈಯಕ್ತಿವಾಗಿ ಚಾರ್ಜ್ ಮಾಡಬೇಕಾದರೆ ಅಥವಾ ಭ್ರಷ್ಟಚಾರದ ಆರೋಪ ಮಾಡಬೇಕಾದರೂ ಕೂಡ ನೋಟಿಸ್ ಕೊಟ್ಟು ಆಧಾರಗಳನ್ನು ಇಟ್ಟುಕೊಂಡು ಚಾರ್ಜ್ ಮಾಡಬೇಕಾಗುತ್ತದೆ. ಸುಮ್ಮ ಸುಮ್ಮನೆ ಬೇಜವಾಬ್ದಾರಿಯಾಗಿ ಯಾವುದೇ ಆರೋಪಗಳನ್ನು ಇಲ್ಲಿ

ಮಾಡುವುದಕ್ಕೆ ಅವಕಾಶವಿಲ್ಲ. ನಿಯಾಮಾವಳಿಯಲ್ಲಿ ಅವಕಾಶವಿಲ್ಲ. ಮಾನ್ಯ ತನ್ವೀರ್ ಸೇಠ್‌ರವರು ಆ ಕ್ಷೇತ್ರದವರು ನರಸಿಂಹರಾಜ ಕ್ಷೇತ್ರದಲ್ಲಿ ಅವರು ಮೂರನೇ ಬಾರಿಗೆ ಆಯ್ಕೆಯಾಗಿ ಮಂತ್ರಿಯಾಗಿ ಕೆಲಸ ಮಾಡಿದಂಥವರು. ಅವರಿಗೂ ಕೂಡ ಜವಾಬ್ದಾರಿ ಇದೆ. ಅವರ ಕ್ಷೇತ್ರದಲ್ಲಿ ಶಾಂತಿ, ನೆಮ್ಮದಿ, ಎಲ್ಲರೂ ಕೂಡ ಸಹಬಾಳ್ವೆಯಿಂದ ಬಾಳಬೇಕು, ಸಾಮರಸ್ಯದಿಂದ ಇರಬೇಕೆನ್ನುವ ಆಸಕ್ತಿ ಇದೆ. ಅವರೂಕೂಡ ಮೂರು ಸಾರಿ ಚುನಾವಣೆಗಳಲ್ಲಿ ಗೆದ್ದಿರುವಂಥವರು. ಅವರು ಬೇಜಬ್ದಾರಿಯಿಂದ ಮಾತನಾಡುವುದಕ್ಕೆ ಆಗುವುದಿಲ್ಲ. ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಇಡೀ ರಾಜ್ಯದ ಜನ ನೋಡುತ್ತಿರುತ್ತಾರೆ. ಅವರ ಕ್ಷೇತ್ರದ ಜನ ನೋಡುತ್ತಿರುತ್ತಾರೆ. ಅವರು ಆ ಭಾಗದ ಶಾಸಕರಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಾಗ, ಅವರು ಮಾತನಾಡುವಾಗ, ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆಂದು ನಾವು ಎಲ್ಲರೂ ಕೂಡ ಗಮನಿಸಬೇಕಾಗುತ್ತದೆ. ಆ ತರಹ ಬಾವಿಸಬೇಕಾಗುತ್ತದೆ. ಅವರು ಜವಾಬ್ದಾರಿಯಿಂದ ಮಾತನಾಡುತ್ತಿರುತ್ತಾರೆ. ಯಾರೋ ಮಧ್ಯೆದಲ್ಲಿ ಎದ್ದು ಬಿಟ್ಟು ಅವರ ಮೇಲೆ ಆರೋಪಗಳನ್ನು ಮಾಡುವುದು ಸರಿಯಾದ ಕ್ರಮವಲ್ಲ, ಇದಕ್ಕೆಲ್ಲಾ ಕಡಿವಾಣ ಹಾಕಬೆಕು. ಇದಕ್ಕೆ ಪದೇ ಪದೇ ಆಸ್ಪದಗಳನ್ನು ಕೊಟ್ಟುಕೊಂಡು ಹೋದರೆ ನಾವು ಇಲ್ಲಿ ಯಾವ ವಿಚಾರವನ್ನು ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ, ಯಾರು ಕೂಡ ತಮ್ಮ ಅಭಿಪ್ರಾಯಗಳನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅವರ ಹಕ್ಕುಗಳನ್ನು ಕೂಡ ರಕ್ಷಣೆ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ, ರಾಜ್ಯದ ಹಿತ ಕಾಪಾಡುವುದು ಬಹಳ ಕಷ್ಟವಾಗುತ್ತದೆ. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಶಂಕರಲಿಂಗೇಗೌಡರವರು ನಮ್ಮ ಸ್ನೇಹಿತರು. ಅವರು ನಾಲ್ಕು ಸಾರಿ ಗೆದ್ದು ಬಂದಿದ್ದಾರೆ. ಅವರು ಕೂಡ ಸೀನಿಯರ್ ಲೀಡರ್, ಅವರು ಕೂಡ ಮೂರು ಬಾರಿ ಗೆದ್ದು ಮಂತ್ರಿಯಾಗಿರತಕ್ಕಂಥವರು, ಇವರು uncharitable ಆಗಿ ಎದ್ದು, ಅವರ ಮೇಲೆ ನೀವೇ ಇದಕ್ಕೆ ಜವಾಬ್ದಾರರು ಎಂದು ಹೇಳಿ ಬಿಟ್ಟರೆ how can he face the people? ಇಡೀ ರಾಜ್ಯದ ಜನ ಅವರ ಬಗ್ಗೆ ಏನೆಂದು ಕೊಳ್ಳುತ್ತಾರೆ? ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಈಗಾಗಲೇ ಡಿಮ್ಯಾಂಡ್ ಮಾಡಿದ್ದೇನೆ. ಅದು ಅಷ್ಟೆ ಅಲ್ಲ, ಇನ್ನು ಮುಂದಕ್ಕೆ ಹೋಗಿ, ನೀವು ಎಲ್ಲರೂ ನನ್ನನ್ನು ಸೇರಿಸಿಕೊಂಡು, ನೀವು ಎಲ್ಲರೂ ಎಂದು ಹೇಳತಕ್ಕಂಥದ್ದು ಇದೆಯೆಲ್ಲ ಇದು ಸಂಸದೀಯ ವ್ಯವಸ್ಥೆಯಲ್ಲಿರತಕ್ಕಂಥ ಸಂಪ್ರದಾಯಗಳಿಗೆ, ಪದ್ಧತಿಗಳಿಗೆ, ನಮ್ಮ ನಿಯಾಮಾವಳಿಗಳಿಗೆ ಬಹಳ ವಿರುದ್ಧವಾದುದು. ಇನ್ನು ಮುಂದೆಯಾದರೂ ಕೂಡ ಮಂತ್ರಿಗಳಿಗೆ ತಾವು ಹೇಳಬೇಕು. ಅವರು ಉತ್ತರ ಕೊಡಲಿಕ್ಕೆ ಅವರಿಗೆ ಎಲ್ಲಾ ಹಕ್ಕುಗಳಿವೆ. Because always the Executive is answerable to the Legislature, ನಾವು ಇಲ್ಲಿಗೆ ಬರುವುದೇ ನಮ್ಮ ಸಮಸ್ಯೆಗಳನ್ನು ಪ್ರಸ್ತಾಪಿಸಲಿಕ್ಕೆ, ಸರ್ಕಾರದಿಂದ ಉತ್ತರ

ಪಡೆಯಲಿಕ್ಕೆ, ಸರ್ಕಾರದಿಂದ ಪರಿಹಾರ ಪಡೆಯಲಿಕ್ಕಾಗಿ, ನಾವು ಇಲ್ಲಿ ಹೇಳುವುದಕ್ಕೆ ಬಂದಿದೇವೆ. ಅದಕ್ಕೆ ಮೊಟಕುಗೊಳಿಸತಕ್ಕಂಥ, ಅಡ್ಡಿಪಡಿಸತಕ್ಕಂಥ ಕೆಲಸಗಳು ಯಾವಾಗಲೂ ಕೂಡ ಆಗಬಾರದು. ಇದು ನನ್ನ ಕಳಕಳಿಯ ಮನವಿ. ನಾವು ಈಗಾಗಲೇ ಒತ್ತಾಯ ಮಾಡಿದ್ದೇವೆ. ಈಗಾಗಲೇ ಏನು ರೆಕಾರ್ಡ್‌ಗೆ ಹೋಗಿದೆ ಆ ರೆಕಾರ್ಡ್‌ನಲ್ಲಿರತಕ್ಕಂಥದ್ದನ್ನು ತೆಗೆಯಬೇಕು. ಮಾನ್ಯ ಶಂಕರಲಿಂಗೇಗೌಡರವರು ಸೀನಿಯರ್ ಲೀಡರ್, ಅವರಿಗೆ ಅನುಭವವಿರತಕ್ಕಂಥವರು, ಅವರು ಸದನಕ್ಕೆ ಹೇಳಬೇಕಾಗುತ್ತದೆ. ಆ ತರಹ ಏನಾದರೂ ಇದ್ದರೆ ಸಾಬೀತು ಮಾಡುತ್ತೇನೆಂದರೆ we have no objection. ಆದ್ದರಿಂದ ಅವರುಈ ಸದನದ ಕ್ಷಮೆ ಯಾಚಿಸಬೇಕೆಂಬ ತಮ್ಮಲ್ಲಿ ಮನವಿ ಮಾಡುತ್ತೇನೆ, ತಾವು ಅದಕ್ಕೆ ಅವರಿಗೆ ಸೂಚಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾವು ಮೈಸೂರು ವಿಷಯ ಮಾತನಾಡಬೇಕೆಂದು ಇದ್ದೆವು. ಆಡಳಿತ ಪಕ್ಷದ ಸದಸ್ಯರು ಇರಬಹುದು, ಸಚಿವರು ಇರಬಹುದು, ಅವರು ಸದನದಲ್ಲಿ ವಿರೋಧ ಪಕ್ಷದ ನಾಯಕರು ನಿಂತಾಗ ಅಥವಾ ವಿರೋಧ ಪಕ್ಷದ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ತಾಳ್ಮೆಯಿಂದ ಕುಳಿತು ಕೇಳಿ, ಏನಾದರೂ ವಿಷಯ ಇದ್ದರೆ ಅವರ ಮಂತ್ರಿಗಳು ಮಾತನಾಡಲಿ ನಾವೇನು ಬೇಡ ಎನ್ನುವುದಿಲ್ಲ. ಮಂತ್ರಿಗಳು ನಮ್ಮ ಗೃಹ ಸಚಿವರು ಸಮರ್ಥರಿದ್ದಾರೆ. ಅದು ಬಿಟ್ಟು ಪದೇ ಪದೇ ಎದ್ದು ನಿಂತುಕೊಳ್ಳುವುದು, ಆಡಳಿತ ಪಕ್ಷದ ಸದಸ್ಯರ ಈ ರೀತಿಯ ವರ್ತನೆಗೆ ತಾವು ದಯಮಾಡಿ ಕಡಿವಾಣ ಹಾಕಬೇಕಾಗುತ್ತದೆ... ನನಗೆ ಸ್ವಲ್ಪ ಅವಕಾಶ ಕೋಡಿ..

ಶ್ರೀ ಹೆಚ್.ಸಿ.ಬಾಲಕೃಷ್ಣ: ಅವರು ಹೇಳುವುದು ಕೇಳಿ ನಂತರ ನೀವು ಮಾತನಾಡಿ. ಆಮೇಲೆ ನೀವು ಎದ್ದು ನಿಂತುಕೊಂಡು ಮಾತನಾಡಿ.

(ಗೊಂದಲ)

ಮಂತ್ರಿಗಳು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಂಡು ಕೇಳುವುದಕ್ಕೆ ತಾವು ಹೇಳಿ ಸಾರ್. ಮೊದಲು ಅವರೇನು ಹೇಳುತ್ತಾರೆ ಕೇಳಿ ನಂತರ ತಾವು ಮಾತನಾಡಿ.

ಶ್ರೀ ಅರವಿಂದ ಲಿಂಬಾವಳಿ: ಆಡಳಿತ ಪಕ್ಷದ ಸದಸ್ಯರಿಗೆ ಕಡಿವಾಣ ಹಾಕಿ ಎಂದರೆ ಏನರ್ಥ?

(ಗೊಂದಲ)

ಅಧ್ಯಕ್ಷರು: ಆಯಿತು ಬಿಡಿ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಡಿ.ಕೆ.ಶಿವಕುಮಾರ್ : ಇಡೀ ರಾಜ್ಯದ education system ಹಾಳು ಮಾಡಿದ್ದಾಯಿತು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಅವರು Question paper ಬಿಡುಗಡೆ ಮಾಡಿಸಿ ಬಿಟ್ಟರೆ leak out ಮಾಡಿ ಬಿಟ್ಟರೆ ಅದು ಹಾಳಾದ ಹಾಗೆಯೇ.

ಅಧ್ಯಕ್ಷರು : ರೇವಣ್ಣನವರೆ ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಏನು ಹೇಳುತ್ತೇನೆಂದರೆ, ನಾನೇದರೂ ತಪ್ಪು ಹೇಳಿಕೊಂಡಾಗ ಆಡಳಿತ ಪಕ್ಷದ ಸದಸ್ಯರಿಗೂ ಅವಕಾಶ ಕೊಡಿ ಅದಕ್ಕೆ ನಾವೇನು ಬೇಡ ಎನ್ನುವುದಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಅವರು ನಿಲುವಳಿ ಸೂಚನೆಯನ್ನು 60 ರಲ್ಲಿ ತಂದು ವಿಷಯ ಮಂಡಿಸುತ್ತಿದ್ದಾರೆ. ಅದಕ್ಕೆ ನೀವು ರೂಲಿಂಗ್ ಕೊಡುವವರೆವಿಗೂ ಆಡಳಿತ ಪಕ್ಷದ ಸದಸ್ಯರು ದಯಮಾಡಿ ಗಂಭೀರದಿಂದ ಇರಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಇದರಲ್ಲಿ ಯಾರೇ ಸದಸ್ಯರು ಇರಬಹುದು. ಆಡಳಿತ ಪಕ್ಷದ ಸದಸ್ಯರು ಇರಬಹುದು, ವಿರೋಧ ಪಕ್ಷದ ಸದಸ್ಯರು ಇರಬಹುದು, ಅವರುಗಳಿಗೆ ವೈಯಕ್ತಿವಾಗಿ ನಿಂದನೆ ಮಾಡುವುದು ತಪ್ಪು. ಮೈಸೂರಿನಲ್ಲಿ ನಡೆದ ಘಟನೆಗೆ ಸಂಬಂಧಪಟ್ಟಂತೆ ಒಬ್ಬ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರ ಬಗ್ಗೆ ಈ ರೀತಿಯಾಗಿ ಹೇಳುವುದು ಸರಿಯಲ್ಲ. ಇವತ್ತಿನ ದಿವಸ ಮೈಸೂರಿನಲ್ಲಿ ಆಗಿರುವ ಘಟನೆಯನ್ನು ಎಲ್ಲಾ ಪಕ್ಷದವರೂ ಸಹ ಖಂಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ಬೇರೆ ರೀತಿಯಲ್ಲಿ ಅಂದರೆ, ಸದಸ್ಯರಿಂದಲೇ ಆಗುವುದೆಂದು ಕೈ ತೋರಿಸಿ ಮಾತನಾಡುವುದಾದರೆ, ನಾವು ಸದನದಲ್ಲಿ ಏಕೆ ಮಾತನಾಡುವುದಕ್ಕೆ ಹೋಗಬೇಕು? ವಿರೋಧಪಕ್ಷದ ಸದಸ್ಯರು ಸುಮ್ಮನೆ ಬಾಯಿ ಮುಚ್ಚಿಕೊಂಡು ಇಲ್ಲಿ ಕುಳಿತುಕೊಂಡು ಎದ್ದು ಹೋಗಬೇಕಾಗುತ್ತದೆ. ಈ ಪರಿಸ್ಥಿತಿ ಬಾರದ ಹಾಗೆ ತಾವು ವಿರೋಧ ಪಕ್ಷದ ಸದಸ್ಯರುಗಳಿಗೆ ರಕ್ಷಣೆಯನ್ನು ಕೊಡಬೇಕೆಂದು ತಮ್ಮಲ್ಲಿ ನಾವು ಮನವಿ ಮಾಡಿ ನಮ್ಮ ಪಕ್ಷದ ಸದಸ್ಯರು ಕೂಡ ಸದನ ಬಾವಿಗೆ ಬಂದು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಲ ಪಕ್ಷದ ಸದಸ್ಯರು ಧರಣಿ ಮಾಡಲು ಸದನದ ಬಾವಿಗೆ ಬಂದರು)

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಬೆಳಿಗ್ಗೆ ಪ್ರತಿಪಕ್ಷದ ನಾಯಕರು ಮತ್ತೆ ಇತರೆ ಕೆಲವು ಸದಸ್ಯರು ಬಹಳ ಗಂಭೀರವಾದಂಥ ಒಂದು ಮಹತ್ವದ ವಿಚಾರದ ಬಗ್ಗೆ ಇಲ್ಲಿ ನಿಯಮ 60ರ ಅಡಿಯಲ್ಲಿ ಚರ್ಚಿಸುವುದಕ್ಕೋಸ್ಕರ ಅವಕಾಶವನ್ನು ಕೋರುವ ಮೇರೆಗೆ ಚರ್ಚೆ ಪ್ರಾರಂಭವಾಯಿತು. ಬಹಳ ಒಂದು ಖೇದದ ವಿಚಾರವೆಂದರೆ, ಮತ್ತೆ ಮತ್ತೆ ಈ ರೀತಿಯ ಪ್ರಕರಣಗಳು ಸದನದಲ್ಲಿ ಜರುಗುತ್ತಿವೆ. ನಾವೆಲ್ಲರೂ ಕೂಡ ಅಂದರೆ, ಆಡಳಿತ ಪಕ್ಷ ಅಥವಾ ಪ್ರತಿಪಕ್ಷ ಇರಬಹುದು, ನಾವೆಲ್ಲರೂ ಜ್ಞಾಪಕ ಇಟ್ಟುಕೊಳ್ಳಬೇಕಾದಂಥದ್ದು ಏನೆಂದರೆ, ನಮ್ಮನ್ನು ಹೊರಗಡೆ ನೋಡುತ್ತಿರುವ ರೀತಿಯೇ ಬೇರೆ ಇದೆ. ನೋಡಬೇಕಾದ ರೀತಿ ಬೇರೆ, ಆದರೆ, ನೋಡುತ್ತಿರುವ ರೀತಿಯೇ ಬೇರೆ ಇದೆ. ವಿಶೇಷವಾಗಿ ಇವತ್ತಿನದಿವಸ ಕಲವು ಮಾಧ್ಯಮಗಳು ಈ

ಅಧಿವೇಶನದಲಿ ಯಾವ್ಯಾವ ರೀತಿಯಲ್ಲಿ ಚರ್ಚೆಯಾಗುತ್ತದೆಂಬ ಬಗ್ಗೆ ರಾಜ್ಯದ ಜನತೆ ಬಯಸುತ್ತೆ ಎಂದು ಮತ್ತು there should more light than heat. ಈ ರೀತಿಯಾದ ಒಂದ ಭಾವನೆಯಿಂದ ಇವತ್ತಿನದಿವಸ ಎಲ್ಲ ಮಾಧ್ಯಮದವರು ಬರೆದಿರುವುದನ್ನು ನಾವು ನೋಡಿದ್ದೇವೆ. ಇಲ್ಲಿರುವ ಬಹಳಷ್ಟು ಜನರು ಒಂದು ಸಲ, ಎರಡು ಸಲ ಗೆದ್ದು so called senior legislatrors ಆಗಿದ್ದೇವೆ. ಈ ಹಿನ್ನೆಲೆಯಲ್ಲಿ ಬಹಳ ಮಹತ್ವದ ಮತ್ತು ಗಂಭೀರದ ವಿಷಯ ಪ್ರಸ್ತಾಪವಾದಾಗ ನಾವು ಗಂಭೀರವಾಗಿ ಅದರ ಬಗ್ಗೆ ಚರ್ಚೆ ಮತ್ತು ಉತ್ತರ ಕೊಡತಕ್ಕಂಥದ್ದು ಇರುತ್ತದೆ. ಮತ್ತೆ ಕೊನೆಗೆ ಇದಕ್ಕೆ ಪರಿಹಾರವನ್ನು ಸಹ ಹುಡುಕಬೇಕಾಗುತ್ತದೆ. ಸದನದಲ್ಲಿ ಈ ರೀತಿಯಾದ ಪ್ರಕರಣಗಳು ಮತ್ತೆ ಮತ್ತೆ ನಡೆಯಬಾರದು ಮತ್ತೆ ಅದೇ ರೀತಿಯಾಗಿ ರಾಜ್ಯದಲ್ಲಿಯು ಕೂಡ ಇವತ್ತು ಚರ್ಚೆ ಮಾಡುವಂಥ ಪ್ರಕರಣಗಳು ನಡೆಯಬಾರದು: ಈ ಒಂದು ಮೆಸೇಜ್ ಅಥವಾ ಒಂದು ಪರಿಹಾರ ಈ ಸದನದಿಂದ ಹೋಗಬೇಕು. ಇಂಥ ಒಂದ ಸಂದರ್ಭದಲ್ಲಿ ಕೆಲವು ಸಲ ವಾದವಿವಾದಗಳು, ಆರೋಪ ಮತ್ತು ಪ್ರತ್ಯಾರೋಪ ಮಾಡುತ್ತಿರುವ ಸಂದರ್ಭದಲ್ಲಿ ಕೆಲವು ಅಹಿತಕರ ಭಾವನೆಗಳಿಂದ ಕೂಡಿದ ಮಾತುಗಳು ಬರುತ್ತವೆ. ಅದು ಆ ಕ್ಷಣಕ್ಕೆ ಬರುತ್ತದೆ, ನಾವುಗಳೂ ಕೂಡ ಈ ರೀತಿಯಾದಂಥವುಗಳನ್ನು ಅನೇಕ ಸಲ ನೋಡಿದ್ದೇವೆ. ಈ ರೀತಿಯಾಗಬಾರದೆಂದು ಪ್ರತಿಪಕ್ಷದ ನಾಯಕರಾದಂಥ ಮಾನ್ಯ ಸಿದ್ದರಾಮಯ್ಯನವರು ಏನು ಅಪೇಕ್ಷೇಪಟ್ಟಿದ್ದಾರೆ ಅದು ಸದನದ ಎಲ್ಲಾ ಸದಸ್ಯರಿಗೂ ಕೂಡ ಅನ್ವಯವಾಗುತ್ತದೆ. ನಾವೆಲ್ಲರೂ ಸದನವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೇ ಹೊರತು ಇನ್ನಷ್ಟು ಕೆಳಮಟ್ಟಕ್ಕೆ ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ನಾವ್ಯಾರು ಕೂಡ ಮಾಡಬಾರದು. ಅಧಿವೇಶನದ ಮೊದಲನೆ ದಿವಸವೇ ಈ ಪ್ರಕರಣವಾಗಿದೆ. ಸುಮಾರು ದಿವಸಗಳು ನಾವೆಲ್ಲ ಇಲ್ಲಿ ಸೇರುತ್ತೇವೆ. ಈ ರೀತಿಯ ಪ್ರಕರಣಗಳು ಆಗದ ರೀತಿಯಲಿ ನಾವೆಲ್ಲರೂ ಕೂಡ ಮನಸಾರೆ ಒಪ್ಪಿ ಈ ರೀತಿಯಾಗದ ಹಾಗೆ ನೋಡಿಕೊಳ್ಳಬೇಕು. ನಮ್ಮ ಹಿರಿಯ ಸದಸ್ಯರಾದ ಮಾನ್ಯ ಶಂಕರಲಿಂಗೇಗೌಡರ ಹೃದಯ ಯಾವರೀತಿಯಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಕೆಲವು ಸಂದರ್ಭದಲ್ಲಿ ಭಾವನಾತ್ಮಕವಾಗಿ ಮಾತುಗಳು ಬರುತ್ತವೆ. ಈ ರೀತಿಯಾಗಿ ಮಾತನಾಡುವಾಗ ಮತ್ತು ಸವಾಲು ಮತ್ತು ಪ್ರತಿಸವಾಲುಗಳು ಅದಂಥ ಸಂದರ್ಭದಲ್ಲಿ ಆವೇಶಕ್ಕೆ ಒಳಗಾಗಿರುತ್ತಾರೆ. ಈ ರೀತಿಯಾಗಿ ಆಗದ ರೀತಿಯಲ್ಲಿ ನಾವೆಲ್ಲರು ಪ್ರಯತ್ನ ಪಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಶಂಕರಲಿಂಗೇಗೌಡರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಮ್ಮೆಲ್ಲರ ಮೇಲೆ ಜವಾಬ್ದಾರಿ ಇದೆ. ಇಡೀ ರಾಜ್ಯದ ಜನತೆ ನಮ್ಮನ್ನು ನೋಡುತ್ತಿದ್ದಾರೆ. ಆದ್ದರಿಂದ, ಇವತ್ತು ಆದಂಥ ಘಟನೆಗೆ ನಾನು ವೈಯಕ್ತಿಕವಾಗಿ ಮತ್ತು ಆಡಳಿತ ಪಕ್ಷದ ಸದಸ್ಯನಾಗಿ ವಿಷಾದ ಸೂಚಿಸುತ್ತೇನೆ. ಮತ್ತೆ ಈ ರೀತಿಯಾಗಿ ಆಗದ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ನಾನು ಭರವಸೆ ಕೊಡುತ್ತೇನೆ. ಸದನ

ಬಾವಿಯಲ್ಲಿ ಧರಣಿ ಮಾಡುತ್ತಿರುವ ಸದಸ್ಯರೆಲ್ಲರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಕೂಡ ಚರ್ಚೆ ಮಾಡಿ ಪರಿಹಾರವನ್ನು ಹುಡುಕೋಣವೆಂದು ನಾನು ಬಹಳ ವಿನಮ್ರತೆಯಿಂದ ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಒಬ್ಬ ಮುತ್ಸದ್ದಿ ರಾಜಕಾರಣಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಿದ್ದು ಸವದಿಯವರೆ, ಮಾನ್ಯ ಶಂಕರಲಿಂಗೇಗೌಡರು ಮಾತನಾಡಿ ಮುಗಿಸಲಿ. ಮಾನ್ಯ ರಾಮದಾಸ್ ಬಗ್ಗೆ ಈ ಕಡೆ ಏನು ಮಾತನಾಡಿದ್ದಾರೆಂಬುದನ್ನು ನಾನು ಆನಂತರ ನೋಡುತ್ತೇನೆ. I will look into the matter.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ(ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಕಾರಜೋಳರವರು ಆ ಸಂದರ್ಭದಲ್ಲಿಯೆ ಎದ್ದು ನಿಂತು ಇದರ ಬಗ್ಗೆ ಅಬ್ಜೆಕ್ಟ್ ಮಾಡಿದರು.

ಅಧ್ಯಕ್ಷರು:– ಒಂದು ನಿಮಿಷ ಎಲ್ಲರು ಸುಮ್ಮನಿರಿ. ಮಾನ್ಯ ಗೋವಿಂದ ಕಾರಜೋಳರವರೆ ತಾವು ಮಾತನ್ನಾಡಿ.

ಶ್ರೀ ಗೋವಿಂದ ಕಾರಜೋಳ(ಸಣ್ಣ ನೀರಾವರಿ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಡುವ ಆರ್ಭಟದಲ್ಲಿ ಕೆಲವು ಮಾತಗಳನ್ನು ಹೇಳಿದರು. ನಾನು ಆ ಸಂದರ್ಭದಲ್ಲಿ ಎದ್ದು ನಿಂತು ಅಬ್ಜಕ್ಷನ್ ಮಾಡಿದೆ. ಆದರೆ, ಈ ಮಾತಿನ ಭರದಲ್ಲಿ ಯಾರು ಕೇಳಿಸಿಕೊಳ್ಳಲಿಲ್ಲವೆಂದು ನನಗೆ ಅನಿಸುತ್ತದೆ. ಆದ್ದರಿಂದ, ಇದನ್ನು ದಯವಿಟ್ಟು ಕಡತದಿಂದ ತೆಗೆದುಹಾಕಿಸಿ ಈ ಪ್ರರಣವನ್ನು ಮುಕ್ತಾಯ ಮಾಡಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಮುತ್ಸದ್ದಿ ಮತ್ತು ನಿಗರ್ವಿ ರಾಜಕಾಯಣಿ. ಆ ಜನಾಂಗದ ಪ್ರಬಲ ರಾಜಕಾರಣಿ ಎಂದು ಹೇಳಿದರೆ ತಪ್ಪಾಗಲಾರದು. ನನಗೆ ಅವರ ಬಗ್ಗೆ ಗೌರವ ಇದೆ. ನಾನು ಅಲ್ಲಿಗೆ ಹೋಗಿದ್ದೇನೆಂಬ ಮಾತು ಅವರು ಮಾತನಾಡುವ ಭರದಲ್ಲಿ ಹೇಳಿದ್ದಾರೆ. ನಾನು ಅನ್ಯಾಯ ಮತ್ತು ಅನೀತಿಗಳ ಜೊತೆ ಒಪ್ಪಂದವನ್ನು ಖಂಡಿತ ಮಾಡಿಕೊಳ್ಳುವುದಿಲ್ಲ. ಈಗ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಜನಸಾಮಾನ್ಯರ ಅಭಿಪ್ರಾಯಗಳನ್ನು ಇಲ್ಲಿ ಹೇಳಿದ್ದೇನೆ ವಿನಾ: ನನ್ನ ವೈಯಕ್ತಿಕವಾದ ಅಭಿಪ್ರಾಯ ಏನು ಇಲ್ಲ. ಆದರೆ, ಮೈಸೂರು ಜನರ ಅಭಿಪ್ರಾಯ ಇರತಕ್ಕಂಥದ್ದು ಏನೆಂದರೆ, ಅಲ್ಲಿ ನಡೆದಿರುವ ಘಟನೆಗೆ ಅಲ್ಲಿಯ ಜನಪ್ರತಿನಿಧಿಗಳೇ ಕಾರಣ ಎಂಬ ಪದವನ್ನು ಹೇಳಿದ್ದೀನಿ. ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುವುದಿಲ್ಲ. ಇದು ಸತ್ಯ.

ಅನ್ಯಾಯ ಅನೀತಿಗಳ ಜೊತೆ ನಾನು ಎಂದಿಗೂ ಒಪ್ಪಂದ ಮಾಡಿಕೊಳ್ಳುವುದಿಲ್ಲ. ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರಗಡೆ ಹೋದರು)

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ದಾಖಲಾತಿಗಳಿವೆ ಮತ್ತು ಅವರು ನೋಟಿಸ್ ಮೂಲಕ ಕೊಟ್ಟಿದ್ದಾರೆ. ...

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:– He should seek personal apology. This is No.1, No.2, ಇಡೀ ಸದನಕ್ಕೆ ಅವರು ಅಪಾಲಜಿ ಕೇಳಬೇಕು. ಸುಮ್ಮನೆ ಈ ರೀತಿಯಾಗಿ ತೇಲಿಸಿ ಮಾಡತಕ್ಕಂಥದ್ದರ ಬಗ್ಗೆ ನಾವು...

ಶ್ರೀ ಎಸ್.ಸುರೇಶ್ ಕುಮಾರ್:– we can't tolerate.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಕರೆದು ಮಾತನಾಡಿದ್ದೀರಿ. ಮತ್ತೆ ಸಂಸದೀಯ ಸಚಿವರು ಕೂಡ ನಮ್ಮ ಜೊತೆಗೆ ಬಂದು ಮಾತನಾಡಿದ್ದಾರೆ. ಅವರು ನಮ್ಮ ಜೊತೆ ಮಾತನಾಡಿ ತಾವು ಹೇಳಿರುವ ಸಲಹೆಗಳನ್ನು ಒಪ್ಪಿಕೊಂಡು ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಮತ್ತೆ ಅವರೂ ಕೂಡ ಅದನ್ನು ಒಪ್ಪಿಕೊಂಡು ಬಂದಿದ್ದಾರೆ. ಆದರೆ, ಈಗ ಮಾನ್ಯ ಸದಸ್ಯರು ಉದ್ಧಟತನದಿಂದ ಮಾತನಾಡಿದರೆ ಹೇಗೆ? ಬಹುಶ: ಅವರಿಗೆ ಮಿನಿಸ್ಟರ್‌ಗಿರಿ ಸಿಕ್ಕಿಲ್ಲವೆಂಬ ಕೋಪ ಇರಬೇಕೇನೂ ಗೊತ್ತಿಲ್ಲ. ಯಾರೋ ಮೇಲಿನ ಕೋಪವನ್ನು ತೆಗೆದುಕೊಂಡು ಇಲ್ಲಿ ಮಾಡುವುದಕ್ಕೆ ಹೋದರೆ ಅದು ಆಗುವುದಿಲ್ಲ. ಅವರ ವರ್ತನೆ ಈ ರೀತಿಯಾದರೆ ಮತ್ತು ಇವರ ಸದಸ್ಯರುಗಳು ಈ ರೀತಿಯಾಗಿ ನಡೆದುಕೊಳ್ಳುವುದಾದರೆ ಇಲ್ಲಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಮತ್ತೆ ನಾವೂ ಕೂಡ ನಮ್ಮ ದಾರಿಯನ್ನು ಹಿಡಿದುಕೊಳ್ಳಬೇಕಾಗುತ್ತದೆ. ಈ ರೀತಿಯಾದರೆ, ನಾವು ಇಲ್ಲಿಗೆ ಏಕೆ ಬರಬೇಕು? ಹಾಗದರೆ, ನಮ್ಮ ನಿಯಮಾವಳಿಗಳೆಲ್ಲವನ್ನು ಗಾಳಿಗೆ ತೂರಿ ಬಿಡೋಣ. ಇಲ್ಲಿದಿದ್ದರೆ ಎಲ್ಲವನ್ನು ಬದಲಾವಣೆ ಮಾಡಿಕೊಳ್ಳೋಣ. ಯಾರು ಏನು ಬೇಕಾದರು ಮಾತನಾಡಬಹುದೆಂದು ನಿಯಮಾವಳಿಗಳನ್ನು ಮಾಡಿಕೊಳ್ಳೋಣ. ಇರತಕ್ಕಂಥ ನಿಯಮಗಳ ಚೌಕಟ್ಟಿನ ಅಡಿಯಲ್ಲಿ ಕೆಲಸ ಆಗಬೇಕು. ಮತ್ತೆ ಅದರಂತೆ ಇಲ್ಲಿ ನಡೆದುಕೊಳ್ಳಬೇಕು. ನೀವು ಏನು ಹೇಳುತ್ತೀರೋ ಅದನ್ನು ಕೇಳುವುದಕ್ಕೆ ನಾವು ತಯಾರಿದ್ದೇವೆ. ಆದ್ದರಿಂದ, ಈ ರೀತಿಯಾದ ಉದ್ಧಟತನ ಮಾಡಬಾರದು.

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಮಾನ್ಯ ಅಧ್ಯಕ್ಷರೆ, ಈ ಗೊಂದಲ ನಿರ್ಮಾಣವಾದಾಗ ತಾವು ತಮ್ಮ ಕಛೇರಿಗೆ ಕರೆಸಿ ಮಾನ್ಯ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಎಲ್ಲರೂ ಕುಳಿತು ಸೌಹಾರ್ಧವಾಗಿ ಈ ರೀತಿಯಾಗಿ

ಸದನ ನಡೆಯಬೇಕು. ಇಂತಹ ಘಟನೆಗಳು ಬಂದಂಥ ಸಂದರ್ಭದಲ್ಲಿ ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚರ್ಚೆಯನ್ನು ಮಾಡಿರುತ್ತೇವೆ. ಮಾನ್ಯ ಸಭಾನಾಯಕರು ಈಗಾಗಲೇ ತಾವೆಲ್ಲಾ ಮಾತನಾಡಿದ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಇಂತಹ ವಿಚಾರಗಳನ್ನು ವ್ಯಕ್ತಪಡಿಸಬೇಕು ಎನ್ನುವಂಥದ್ದು ಆಗಿತ್ತು. ಸಂಪ್ರದಾಯದಂತೆ ನಾವೆಲ್ಲ ಇದನ್ನು ಅಪೀಲ್ ಮಾಡತಕ್ಕಂಥದ್ದು. ಧರಣಿ ಮುಂದುವರೆಯತಕ್ಕಂಥದ್ದು, ಆದರೆ ನಾವು ನಿರೀಕ್ಷೆ ಮಾಡಿದ್ದು ಅವರಿಂದ ವಿಷಾದ ವ್ಯಕ್ತಪಡಿಸುತ್ತದೆ ಮುಂದೆ ಸದನ ನಡೆಯಬೇಕು. ಪ್ರಶ್ನೋತ್ತರಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿರುತ್ತೇವೆ. ಪ್ರಶ್ನೋತ್ತರ ನಡೆಯಬೇಕು, ಚರ್ಚೆ ಬೇಕಾದರೆ ಇವತ್ತಲ್ಲ ನಾಳೆ ತೆಗೆದುಕೊಳ್ಳೋಣ. ಈ ರೀತಿಯಾದ ಒಂದು ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ನಾವು ಸಹಕಾರವನ್ನು ಕೊಟ್ಟಂಥ ಸಂದರ್ಭದಲ್ಲಿಯೂ ಕೂಡ ಈ ರೀತಿಯಾದಂಥ ವರ್ತನೆಯನ್ನು ಬಹುಶ ಸದನ ಗಮನಿಸಬೇಕಾಗುತ್ತದೆ. ಮಾನ್ಯ ಸಭಾನಾಯಕರು ಗಮನಿಸಬೇಕಾಗುತ್ತದೆ, ಅದು ಅವರ ಜವಾಬ್ದಾರಿಕೆಯಾಗುತ್ತದೆ ಏನಹ ನಾವು ಏನು ಮಾತನಾಡಿದ್ದೇವೆ ಆ ಮಾತಿನಂತೆ ನಾವು ನಡೆಯುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ಸದನ ನಡೆಯಬೇಕು, ಸದನದಲ್ಲಿ ಏನಾಗುತ್ತದೆ, ಒಳಗೆ ವಿರೋಧ ಪಕಷದವರು ಯಾರೂ ಒಬ್ಬರು ಅನಗತ್ಯವಾದಂಥ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಾರೆ ಎನ್ನುವಂಥದ್ದನ್ನು ಹೋಗಲಾಡಿಸಬೇಕೆಂದು ಹೇಳಿ ನಾವು ಚರ್ಚೆಗೆ ಪ್ರಾಮುಖ್ಯತೆಯನ್ನು ಕೊಡಬೇಕನ್ನುವಂಥ ದೃಷ್ಟಿಯಿಂದ ನಾವೆಲ್ಲಾ ಸಹಕಾರವನ್ನು ಕೊಟ್ಟಾಗಲೂ ಕೂಡ ಈ ರೀತಿಯ ಅಸಹಕಾರ ಮನೋಭಾವ ಅಲ್ಲಿ ಇತ್ತು ಎಂದು ಹೇಳಿದರೆ, ನಾವು ಏನು ಮಾಡಬೇಕು ಗೊತ್ತಿಲ್ಲ. ಬಹುಶ ಇದು ತಮ್ಮ ಗಮನಕ್ಕೆ ತರತಕ್ಕಂಥ ವಿಚಾರ ಅದಕ್ಕೆ ತಾವು ಉಂಟು ಮಾನ್ಯ ಸಭಾನಾಯಕರು ಉಂಟು. ಅದಕ್ಕಾಗಿ ಉತ್ತರವನ್ನು ಹೇಳಬೇಕು.

ಶ್ರೀ ಜೆ.ಜನಾರ್ಧನರೆಡ್ಡಿ(ಮಾನ್ಯ ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, ಇವತ್ತು ಏನು ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಮೈಸೂರು ವಿಚಾರವನ್ನು ಮಾತನಾಡಬೇಕೆಂದು ಸನ್ಮಾನ್ಯ ಪ್ರತಿಪಕ್ಷದ ನಾಯಕರು ಪ್ರಾರಂಭ ಮಾಡಿದರು. ಸನ್ಮಾನ್ಯ ಗೃಹ ಮಂತ್ರಿಗಳು ಮೈಸೂರು ಶಾಂತ ರೀತಿಗೆ ಬರುತ್ತಿದೆ. ಯಾವುದೇ ಕಾರಣಕ್ಕೂ ಕೂಡ ನಾವು ಇದನ್ನು ಮತ್ತೆ ಚರ್ಚೆ ಮಾಡೋಣವೆಂದು ಹೇಳಿದರೂ ಕೂಡ ಬಹಳ ಗಂಭೀರವಾಗಿ ತೆಗೆದುಕೊಂಡು ಸರ್ಕಾರದ ಮೇಲೆ ಆರೋಪಗಳನ್ನು ಮಾಡಿ ಗೃಹ ಮಂತ್ರಿಗಳು ವಿಫಲರಾಗಿದ್ದಾರೆ.....

(ಗೊಂದಲ)

ಅಧ್ಯಕ್ಷರು: Please, ನಾನು ಮಾತನಾಡುತ್ತೇನೆ ಸ್ವಲ್ಪ ತಡೆಯಿರಿ. ಒಂದು ನಿಮಿಷ ತಡೆಯಿರಿ.

(ಗೊಂದಲ)

ಕೆ-ಎಸ್‌ಎಲ್-೦

ಶ್ರೀ ಡಿ.ಕೆ.ಶಿವಕುಮಾರ್: ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಹೊಗಳುವುದಕ್ಕೆ ಇಲ್ಲಿ ಬಂದಿದ್ದೇವಾ? ನಾವು ಹೊಗಳುವುದಕ್ಕೆ ಬಂದಿಲ್ಲ. ಮುಖ್ಯಮಂತ್ರಿಗಳು ಮಾಡಿದ್ದೆಲ್ಲಾ ಅನ್ಯಾಯವೆಂದು ಹೇಳುವುದಕ್ಕೆ ನಾವು ಇಲ್ಲಿ ಬಂದಿರುವುದು. ಒಳ್ಳೆಯದನ್ನು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇವೆ.

ಅಧ್ಯಕ್ಷರು: ಮಾನ್ಯ ಶಂಕರಲಿಂಗೇಗೌಡರಿಗೆ ಸೀಮೀತವಾಗಿ ಎಲ್ಲಿ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ಏನಾದರೂ ಮಾತನಾಡುವುದು ಇದ್ದರೆ ಮಾತನಾಡಬಹುದು.

ಶ್ರೀ ಜಿ.ಜನಾರ್ದನರೆಡ್ಡಿ: ಅದರ ಬ್ಯಾಕ್‌ಗ್ರೌಂಡ್ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು: ಈಗ ಬ್ಯಾಕ್‌ಗ್ರೌಂಡ್ ಬೇಡ. ಮುಂದೆ ಚರ್ಚೆ ನಡೆಯುವಾಗ ತಾವು ಹೇಳುವಿರಂತೆ, ಮಾನ್ಯ ಶಂಕರಲಿಂಗೇಗೌಡರ ಹೇಳಿಕೆಯ ಬಗ್ಗೆ ಮಾತ್ರ ಮಾತನಾಡಿ. ಅದಕ್ಕೆ ಸಿಮೀತವಾಗಿ ಮಾತ್ರ ನಾವು ಮಾತನಾಡುತ್ತಿದ್ದೇವೆ.

ಶ್ರೀ ಜಿ.ಜನಾರ್ದನರೆಡ್ಡಿ: ಆಯಿತು. ಅದಕ್ಕೆ ಸೀಮಿತವಾಗಿಯೇ ನಾನು ಮಾತನಾಡುತ್ತಿದ್ದೇನೆ. ಬೇರೆ ಮಾತನಾಡುವುದು ಬೇಡ. ಮೈಸೂರು ಗಲಭೆಗೆ ಸಂಬಂಧಪಟ್ಟಂತೆ ಇವತ್ತು...

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಮೈಸೂರು ವಿಚಾರ ನಂತರ, ಈ ಶಂಕರಲಿಂಗೇಗೌಡರ ವಿಚಾರ ಅಷ್ಟೆ ನಮಗೆ ಬೇಕಾಗಿರುವುದು.

ಶ್ರೀ ಜಿ.ಜನಾರ್ದನರೆಡ್ಡಿ: ಮಾನ್ಯ ಶಂಕರಲಿಂಗೇಗೌಡರು ಏನು ಆರೋಪ ಮಾಡಿದರು ಎಂದು ನೀವು ಎಲ್ಲರೂ ಬಾವಿಗೆ ಬಂದಿದ್ದೀರಿ? ಇವರು ಬಾವಿಗೆ ಬಂದಿರುವ ಕಾರಣ, 2000 ಮಂದಿ ಸೇರಿ ಮೈಸೂರಿನಲ್ಲಿ ಗಲಾಟೆ ಮಾಡಿ ACP ಸುರೇಶ್ ಕುಮಾರ್‌ರವರಿಗೆ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಗಾಯಗಳಾಗಿವೆ. ಇವತ್ತು ಪೊಲೀಸ್‌ರಿಂದ ಲಾಠಿ ಪ್ರಹಾರವಾಗುತ್ತಿದೆ. ಪ್ರಚೋದನೆಯನ್ನು ನೀವೇ ಈಗ ಮಾಡುತ್ತಿದ್ದೀರಿ. ಬಾವಿಯಲ್ಲಿ ನೀವು ಬರುವುದರಿಂದ ಅಲ್ಲಿ ಜನಗಳಿಗೆಲ್ಲಾ ಪ್ರಚೋದನೆ ಮಾಡಿ...

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಒಬ್ಬ ACP ಗೆ ರಕ್ಷಣೆ ಕೊಡುವುದಕ್ಕಾಗಿಲ್ಲ. ಈ ಸರ್ಕಾರಕ್ಕೆ ನಾಚಿಕೆಯಾಗಬೇಕು.

ಶ್ರೀ ಜಿ.ಜನಾರ್ದನರೆಡ್ಡಿ: ಇವತ್ತು ಇವರು ಇಲ್ಲಿ ಬಾವಿಯಲ್ಲಿ ಬಂದಿದ್ದಾರೆ. ಅಲ್ಲಿ ಅಮಾಯಕ ಕಾರ್ಯಕರ್ತರವನ್ನು ರೊಚ್ಚಿಗೆಬ್ಬಿಸಿ ಗಲಾಟೆಯನ್ನು ಮಾಡಿಸುತ್ತಿದ್ದಾರೆ. ಮೈಸೂರಿನ್ಲಲಿ ಮತ್ತೆ ನೀವು ಗಲಾಟೆಯನ್ನು ಮಾಡಿಸುತ್ತಿದ್ದೀರಿ. ಮಾನ್ಯ ಶಂಕರಲಿಂಗೇಗೌಡರು ಇವತ್ತು ಏನು ಹೇಳಿದ್ದಾರೆ ಅದು ಸತ್ಯ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಯಾರು ಮಾಡಿಸಿದ್ದಾರೆನ್ನುವ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ, ಇದು ಯಾರ ಹೇಳಿಕೆ?

ಶ್ರೀ ಜಿ.ಜನಾರ್ದನರೆಡ್ಡಿ: ನೀವು ಬಾವಿಯಲ್ಲಿ ಬಂದು ಅಲ್ಲಿ ಗಲಾಟೆಯನ್ನು ಮಾಡಿಸುತ್ತೀದ್ದೀರಿ.

ಅಧ್ಯಕ್ಷರು: ಬಾವಿಯಲ್ಲಿ ನಿಂತು ಯಾರು ಮಾತನಾಡಬಾರದು. ಬೇಕಾದರೆ ಪ್ರತಿಭಟನೆಯನ್ನು ಮಾಡಿ. ಬಾವಿಯಲ್ಲಿ ನಿಂತು ಮಾತನಾಡಬೇಡಿ ಅದರ ಬಗ್ಗೆ ನಾವು ಏನು ನಿರ್ಣಯ ತೆಗೆದುಕೊಳ್ಳಬೇಕು, ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ ಇದೆ. ನೀವು ವೆಲ್‌ನಲ್ಲಿ ಬಂದು ಇಲ್ಲಿ ಮಾತನಾಡುವಂಥದು ಸರಿಯಾದುದು ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರುಗಳು ಇದ್ದಾರೆ. ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರೆ, ನೀವು ವೆಲ್‌ನಲ್ಲಿ ಬಂದು ಚರ್ಚೆಯಲ್ಲಿ ಬಾಗವಹಿಸುವಂಥದ್ದು ಇಲ್ಲ. ಇಲ್ಲಿ ನಿಂತು ಮಾತನಾಡಿದ್ದು ಯಾವುದು ದಾಖಲೆಗೆ ಹೋಗುವುದಿಲ್ಲ. ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ನೀವು ನಿಮ್ಮ ಸ್ಥಳಕ್ಕೆ ಹೋಗಿ ಏನಾದರೂ ಅಭಿಪ್ರಾಯ ಹೇಳುವುದು ಇದ್ದರೆ ಹೇಳಿ.

ಶ್ರಿ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಜನಾರ್ದನರೆಡ್ಡಿಯವರು ಜವಾಬ್ದಾರಿ ಇರತಕ್ಕಂಥ ಮಂತ್ರಿಯವರು, ಅವರು ಮಂತ್ರಿಮಂಡಲದಲ್ಲಿರತಕ್ಕಂಥ ಒಬ್ಬ ಸಚಿವರು. ಅವರು ಅನಗತ್ಯವಾಗಿ ಇಲ್ಲಿ ಚರ್ಚೆ ಪ್ರಾರಂಭ ಮಾಡಿದ್ದಕ್ಕೋಸ್ಕರವಾಗಿ ಮೈಸೂರಿನಲ್ಲಿ ಗಲಾಟೆ ಪ್ರಾರಂಭವಾಗಿದೆ ಎಂದು ಹೇಳತಕ್ಕಂಥದ್ದು ಇದೆಯಲ್ಲಾ ಹಾಗಾದರೆ ಇಲ್ಲಿ ಯಾರು ಚರ್ಚೆ ಮಾಡುವಂತಿಲ್ಲವೇ/ ಯಾರು ಯಾವ ವಿಷಯವನ್ನು ಪ್ರಸ್ತಾಪ ಮಾಡುವಂತಿಲ್ಲವೆಂದಾಯಿತು. ಈ ತರಹ ಇಲ್ಲಿ ಧರಣಿ ಮಾಡತಕ್ಕಂಥದ್ದು ಬಾವಿಯೊಳಗಡೆ ಬರತಕ್ಕಂಥದ್ದು ಅದು ರಾಜಕೀಯ ಪಕ್ಷದ ಎಲ್ಲ ಸದಸ್ಯರ ಕರ್ತವ್ಯ. ಜವಾಬ್ದಾರಿಯ ಒಂದು ಅಂಗ ಕೂಡ. ಹೀಗೆ ಇರುವಾಗ ಮಾನ್ಯ ಸಭಾನಾಯಕರು ಇಲ್ಲಿಯೆ ಇದ್ದಾರೆ. ಮಾನ್ಯ ಸಂಸದೀಯ ಸಚಿವರು ಇಲ್ಲಿಯೆ ಇದ್ದಾರೆ. ಮಾನ್ಯ ಗೃಹ ಮಂತ್ರಿಗಳಿದ್ದಾರೆ, ಜಿಲ್ಲಾ ಮಂತ್ರಿಗಳಿದ್ದಾರೆ. ಮಾನ್ಯ ಜನಾರ್ಧನರೆಡ್ಡಿಯವರು ಎದ್ದು ಈ ತರಹ, ನಾನು ಬೆಳಿಗ್ಗೆ ಅದನ್ನೆ ಹೇಳಿದ್ದು. ಇವತ್ತು ಕೂಡ ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ. ಅದಕ್ಕೋಸ್ಕರವೆ 'ಚರ್ಚೆಯಾಗಬೇಕು. ಚರ್ಚೆಯಾಗಿ ಅದಕ್ಕೆ ಅಲ್ಲಿ ಶಾಂತತೆ ಸಿಗಬೇಕು ಎಂದು ಹೇಳಿ ನಾವು ಚರ್ಚೆಮಾಡಿ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಹೇಳಿದೆವೆ ಹೊರತು, ನಾವು ಅಲ್ಲಿಯ ಶಾಂತಿಯನ್ನು ಕದಡತಕ್ಕಂಥ ಪ್ರಯತ್ನ ಮಾಡಬೇಕು ಎನ್ನತಕ್ಕಂಥದ್ದು ಅಲ್ಲ. ಯಾರು ಮಾಡಬಾರದು, ಇದರಲ್ಲಿ ರಾಜಕೀಯ ಮಾಡತಕ್ಕಂಥ ಉದ್ದೇಶ ನಮಗೆ ಇಲ್ಲ. ನಮಗೆ ಅಲ್ಲಿ ಶಾಂತಿ ನೆಲೆಸಬೇಕು, ಎಲ್ಲರೂ ಕೂಡ ಸೌಹಾರ್ದತೆಯಿಂದ ಬದುಕಬೇಕು. ಅಲ್ಲಿ ಅಣ್ಣ ತಮ್ಮಂದಿರಂತೆ ಇರಬೇಕು ಎನ್ನುವಂಥದ್ದು ಮಾಡುತ್ತೇವೆ ಹೊರತು ಇದರಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳತಕ್ಕಂಥ ಪ್ರಯತ್ನ ನಾವು ಯಾವತ್ತು ಮಾಡುವುದಿಲ್ಲ. ಇಲ್ಲಿಯವರೆಗೆ ನಾವು ಮಾಡಿಲ್ಲ, ಮುಂದೆಯೂ ಕೂಡ ನಾವು ಮಾಡುವುದಿಲ್ಲ. ಆದರೆ ಇವತ್ತು ಅಲ್ಲಿ ಏನಾಗಿದೆ, ಅಲ್ಲಿ ಶಾಂತಿ ನೆಲೆಸಬೇಕು

ಎನ್ನುವ ಕಾರಣಕ್ಕೋಸ್ಕರವೇ ಸರ್ಕಾರ ಕಠಿಣವಾದಂಥ ಕ್ರಮ, ತೆಗೆದುಕೊಳ್ಳಬೇಕು, ನಿಸ್ಪಕ್ಷಪಾತವಾದಂಥ ಕ್ರಮ ಜರುಗಿಸಬೇಕು. ಅಲ್ಲಿ ಏನು ನಡೆಯುತ್ತಿದೆ ಅದನ್ನು ಹತ್ತಿಕ್ಕಿ ಎಲ್ಲರೂ ಕೂಡ ನೆಮ್ಮದಿಯಿಂದ ಬಾಳತಕ್ಕಂಥ ಕೆಲಸ ಆಗಬೇಕು ಎನ್ನತಕ್ಕಂಥ ಉದ್ದೇಶದಿಂದ ಇಲ್ಲಿ ಪ್ರಸ್ತಾಪ ಮಾಡಿರುವಂಥದು. ಇದರ ಬಗ್ಗೆ ಚರ್ಚೆ ಬೇಡ ಎನ್ನತಕ್ಕಂಥ ಧೋರಣೆ ಸರ್ಕಾರಕ್ಕೆ ಇದ್ದರೆ ನಾವು ಏಕೆ ಇಲ್ಲಿಗೆ ಬರಬೇಕು. ಇದನ್ನು ಹೇಗೆ ಸಂಸದೀಯ ವ್ಯವಸ್ಥೆ ಎಂದು ಕರೆಯುವುದಕ್ಕೆ ಸಾಧ್ಯವಾಗುತ್ತದೆ. ಈ ತರಹ ಮಂತ್ರಿಗಳು ನೀವು ಬಾವಿ ಬಂದಿದ್ದೀರಿ ಇಲ್ಲಿ ಪ್ರಸ್ಥಾಪ ಮಾಡುವುದರಿಂದ ಅಲ್ಲಿ ಪ್ರಚೋದನೆಯಾಗುತ್ತದೆ ಎಂದು ಹೇಳುವುದಾದರೆ ನಾವು ಯಾವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ? ಹಾಗಾದರೆ ಸರ್ಕಾರವೆ ಇದನ್ನು ಮಾಡಿಸುತ್ತಿದೆ ಎಂದು ನಾವು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿಯೇ ಇಲ್ಲ. ರೂಲಿಂಗ್ ಎಲ್ಲಿ ಕೊಟ್ಟಿದ್ದಾರೆ?

ಶ್ರೀ ಬಸವರಾಜ ಆರ್ ಬೊಮ್ಮಾಯಿ; ಮಾನ್ಯ ಅಧ್ಯಕ್ಷರೆ, ತಾವು ಆ chairನಲ್ಲಿ ಕುಳಿತುಕೊಂಡು ಸ್ಪಷ್ಟವಾಗಿ ಹೇಳಿದ್ದೀರಿ. ಒಬ್ಬರ ಮೇಲೆ ಒಬ್ಬರು ಆರೋಪವನ್ನು ಮಾಡುವುದು ತಪ್ಪುತ್ತಿತ್ತು. ಸಂಪೂರ್ಣವಾಗಿ ಚರ್ಚೆಯಾಗುತ್ತಿತ್ತು. ಅದಕ್ಕೆ ಒಂದು ಪರಿಹಾರ ಸಿಗುತ್ತಿತ್ತು. ಇಲ್ಲಿ ಉದ್ದೇಶ ಶಾಂತಿ ನೆಲೆಸಬೇಕು ಪರಿಹಾರ ಅಂಥ ಅಲ್ಲ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧಪಕ್ಷದ ನಾಯಕರು): ಎಲ್ಲಿ ಅದು ಅರ್ಥಪೂರ್ಣ ಚರ್ಚೆಯಾಗುತ್ತದೆಯೇ, ನಾನು I want to know what is the stand of the Government? ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ, ಸಂಸದೀಯ ಸಚಿವರು ಇಲ್ಲಿ ಇದ್ದಾರೆ ಅವರು stand ಏನು ಎಂಬುದನ್ನು clear ಮಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ(ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ.

ಶ್ರೀ ಡಿ.ಕೆ.ಶಿವಕುಮಾರ್(ಕನಕಪುರ): ಇಲ್ಲಿ ತಾವು ಏನು ತೀರ್ಮಾನ ಮಾಡಿದ್ದೀರಿ? ತಾವು ತೀರ್ಮಾನ ಮಾಡಿದ ಪ್ರಕಾರ ಅದನ್ನು ನಾವುಗಳು ಒಪ್ಪಿಕೊಂಡು, ತಾವು ತೀರ್ಮಾನ ಮಾಡಿದ ಪ್ರಕಾರ ಅಸೆಂಬ್ಲಿಯನ್ನು ನಡೆಸುವುದಕ್ಕೆ ನಾವು ಸಹಕಾರವನ್ನು ಕೊಡುವುದಕ್ಕೆ ಸಿದ್ದರಾಗಿದ್ದೇವೆ. ನಮಗೆ ಅಸೆಂಬ್ಲಿಯು ನಡೆಯಬೇಕು. Question Hour ಆಗಬೇಕು, discussion ಆಗಬೇಕು, ಎಲ್ಲಾ ವಿಚಾರದ ಬಗ್ಗೆ ನಾವುಗಳು ಒಪ್ಪಿಕೊಂಡು ಇಲ್ಲಿಗೆ ಬಂದಿದ್ದೇವೆ. ಪುನ: ಒಂದೊಂದೆ ಕೆಣಕಿಕೊಂಡು ಇದನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಯೋಚನೆಯನ್ನು ಮಾಡುತ್ತಿದ್ದೀರಿ? ದಯವಿಟ್ಟು, ನೀವು direct ಮಾಡಬೇಕು ಮೆಂಬರ್‌ಗೆ ಅದು ತಮ್ಮ ಕೈಯಲ್ಲಿ ಇದೆ. ನಾವು ಅವರನ್ನು ಒತ್ತಾಯ ಮಾಡುವಂತಹ ಸಂದರ್ಭವಿಲ್ಲ. ಅವರ

ವಿಲ್ ಅವರದು. But ನಮ್ಮ way ಇದೆ. ನಿಮ್ಮನ್ನು request ಮಾಡಿಕೊಳ್ಳುವಂತಹದ್ದು, ನೀವು ಅವರಿಗೆ ಮಾರ್ಗದರ್ಶನವನ್ನು ಕೊಡುವಂತಹದ್ದು, ತಮಗೆ ಒಂದು ಅವಕಾಶವಿದೆ. ದಯವಿಟ್ಟು ಶಾಂತರೀತಿಯಿಂದ ಚರ್ಚೆ ಆಗಬೇಕಾದರೆ ಮೆಂಬರ್‌ಗೆ direct ಮಾಡಿ. Chief Minister is here. ಇಲ್ಲಿ ಮಾತನಾಡಿದರೆ ಮಂತ್ರಿಗಳಿಗೆ ಪ್ರಮೋಷನ್ ಸಿಗುವುದಿಲ್ಲ. double portfolio ಸಿಗುವುದಿಲ್ಲ. ಇಲ್ಲಿ ಎಂಎಲ್‌ಎಗಳಿಗೆ ಏನು ಸಿಗುವುದಿಲ್ಲ. Chief Minister can sort out this problem. ತಾವು ಏನಾದರೂ ಹೇಳಿ, ಅಥವಾ ಸಿ.ಎಂ.ರವರು ಹೇಳಲಿ. ಇಲ್ಲಿ ಏನು ಅವಶ್ಯಕತೆ ಇದೆ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, ನಾನು ಆಗಿನಿಂದಲೂ ಮಾತನಾಡುವುದಕ್ಕೆ ಅವಕಾಶವನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ,..

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ ತಾಳಿ. ನಮಗೂ ಕೂಡ ಮಾತನಾಡುವುದಕ್ಕೆ ಹಕ್ಕು ಇದೆ. ನನ್ನ viewವನ್ನು ನಾನು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ,..

SRI BASVARAJA BOMMAI:- I don't need your recommendation. I know my right to speak as a Member of this House. You cannot command. . . .

ಶ್ರೀ ಹೆಚ್.ಸಿ.ಬಾಲಕೃಷ್ಣ: ಸರ್ಕಾರದ ನಿಲುವನ್ನು ತಾವು ಸರಿಯಾಗಿ ಪ್ರಕಟಿಸಿ ಸ್ವಾಮಿ. ಒಬ್ಬರು ಇದು ಸರಿಯಾಗಿಲ್ಲ ಈ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಏನು ಹಗುರವಾಗಿ ಕಮಿಟ್ ಮಾಡುತ್ತಿದ್ದಿರಾ?

ಅಧ್ಯಕ್ಷರು: ದಯವಿಟ್ಟು ಯಾರು ಮಧ್ಯದಲ್ಲಿ ಮಾತನಾಡಬೇಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸರ್ಕಾರದ ನಿಲುವು ಏನು ಎಂದು ಸರಿಯಾಗಿ ಪ್ರಕಟಿಸಿ ಸ್ವಾಮಿ.

SRI BASAVARAJA BOMMAI:- Sir, my only request is,....

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: One minute ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಅಸೆಂಬ್ಲಿಯನ್ನು ನಡೆಸುವುದಕ್ಕೆ ಇವರ ಗಮನವೇ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ವಿರೋಧಪಕ್ಷದ ನಾಯಕರು,...

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಸಚಿವರಾದ ಶ್ರಿ ಸುರೇಶ್ ಕುಮಾರ್‌ರವರು ಹಾಗಾದರೆ ಮಂತ್ರಿಗಳಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಏತಕ್ಕಾಗಿ ತಂದಿದ್ದಾರೆ? ಅಲ್ಲಿ ನಡೆದಿರುವಂತಹ ಘಟನೆ ಮಹತ್ವವನ್ನು ಪಡೆದಿರುವುದರಿಂದ ಅದನ್ನು ತಂದಿದ್ದಾರೆ. ಅವರ ಉದ್ದೇಶ ಇಲ್ಲಿ ಸಂಪೂರ್ಣವಾಗಿ ಎಳೆಎಳೆಯಾಗಿ ಚರ್ಚೆಯಾಗಿ ಸರ್ಕಾರದ ಗಮನವನ್ನು ಸಂಪೂರ್ಣವಾಗಿ ಪಡೆದು ಅಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಿ ಮುಂದೆ ಅಲ್ಲಿ ಶಾಂತಿಯು ನೆಲೆಸುವುದರ ಬಗ್ಗೆ ಅವರ ಉದ್ದೇಶವಾಗಿದೆ. ಅದನ್ನು ನಾನು doubt ಮಾಡುವುದಿಲ್ಲ. ಆದ್ದರಿಂದ ಆ ಉದ್ದೇಶವು ಈಡೇರಬೇಕಾದರೆ ತಾವು ಏನು ಹೇಳಿದ್ದೀರಿ, ಏನು ಇವತ್ತು ಒಪ್ಪಿಕೊಂಡಿದ್ದೀರಿ ಆ ರೀತಿ ನಡೆದುಕೊಂಡಿದ್ದರೆ ಈ ತರಹ ಆಪಾದನೆಗಳು ಬರುವುದು ತಪ್ಪುತ್ತಿತ್ತು. ಅದು ಆಗದೆಯೇ ಏನಾಯಿತು, preliminary submissionನಲ್ಲಿ ಏನೇನು ಮಾತನಾಡಬೇಕು ಎಲ್ಲವನ್ನು ಮಾತನಾಡಿದ್ದೀರಿ.

(ಗೊಂದಲ)

ಅದಕ್ಕಾಗಿ ಮಾನ್ಯ ಶಂಕರಲಿಂಗೇಗೌಡರು ಮಾತನಾಡಿದರು.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋದಪಕ್ಷದ ನಾಯಕರು): ಮಾನ್ಯ ಬೊಮ್ಮಾಯಿಯವರೆ,...

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆ ಮಾತ್ರ ಇಲ್ಲಿ ಇದೆ.

ಅಧ್ಯಕ್ಷರು: ಈ ವಿಷಯ ಬರಲಿಲ್ಲ. ಅದು ಬಂದಿಲ್ಲ. ಈ ಬಗ್ಗೆ ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರಿಗೆ ಎಲ್ಲವೂ ಗೊತ್ತಿದೆ. ಶಂಕರಲಿಂಗೇಗೌಡರ statement ಬಗ್ಗೆ ಇಲ್ಲಿ ಪ್ರಶ್ನೆ ಬಂದಿಲ್ಲ.

ಶ್ರೀ ಕರುಣಾಕರರೆಡ್ಡಿ: ಮಾನ್ಯ ಶಂಕರಲಿಂಗೇಗೌಡರದು ತಮ್ಮದೇ ಆದ ನಿಲುವು ಇದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಬಸವರಾಜ್‌ರವರೆ...

ಶ್ರೀ ಬಸವರಾಜ ಬೊಮ್ಮಾಯಿ: ನಾನು ನನ್ನ ಮಾತನ್ನು ಇನ್ನು ಮುಗಿಸಿಲ್ಲ. ನನಗೆ ಮಾತನಾಡವುದಕ್ಕೆ allow ಮಾಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ಏನೋ ಮಾಡನಾಡಿದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ: ನೀವು ಸುಮ್ಮನಿರಿ, ನಾನು ಮಾನ್ಯ ಸಭಾಧ್ಯಕ್ಷರನ್ನುದ್ದೇಶಿಸಿ ಮಾತನಾಡುತ್ತಿದ್ದೇನೆ. ಶಂಕರಲಿಂಗೇಗೌಡರದು ಅವರದೇ

ಆದಂತಹ ನಿಲುವು ಇದೆ, ನೀವು ಆ ಬಗ್ಗೆ ಮಾತನಾಡಿದ್ದೀರಿ, request ಮಾಡಿದ್ದೀರಿ.

ಅಧ್ಯಕ್ಷರು: ಅದು ಅಗಿಲ್ಲ. Statement ಬಗ್ಗೆ ಅವರದು clear ಮಾಡಬೇಕಾಗಿತ್ತು. ಅಷ್ಟೆ ಅಲ್ಲಿ ಇರುವುದು. ಇಲ್ಲಿ ಬೇರೆ subject ಬಂದಿರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಿಲುವಳಿ ಸೂಚನೆ ಹಿನ್ನೆಲೆ ಹೇಗೆ ಇದೆ ಎಂದು ಅವರ statementನಲ್ಲಿಯೇ ಇದೆ. ಅದ್ದರಿಂದ ಅದನ್ನು ಸರಿಪಡಿಸದ ಹೊರತು ಅದು ಸರಿಯಾಗುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಏನು ನಡೆಯುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಕೊಠಡಿಯಲ್ಲಿ ಏನು ನಡೆಯಿತು, ವಿರೋಧಪಕ್ಷದ ನಾಯಕರು ಹಾಗೂ ಸಭಾನಾಯಕರು ನಾವುಗಳು ಕುಳಿತು ಸೌಹಾರ್ದವಾಗಿ ಸಭೆಯನ್ನು ನಡೆಸುವುದಕ್ಕೆ ಒಂದು ತೀರ್ಮಾನವನ್ನು ಮಾಡಿದಂತಹ ಹಿನ್ನೆಲೆಯಲ್ಲಿ..

ಶ್ರೀ ಬಸವರಾಜ ಬೊಮ್ಮಾಯಿ: ಈ ಬಗ್ಗೆ ಅವರದೇ ಆದ ನಿಲುವು ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ತದನಂತರದ ಬೆಳವಣಿಗೆಗಳು ಗೊತ್ತಿಲ್ಲವೆಂದು ಕಾಣಿಸುತ್ತದೆ. ನೀವು ಮತ್ತು ಮಾನ್ಯ ಅಧ್ಯಕ್ಷರು ನನಗೆ ನಿಮ್ಮ ಕೊಠಡಿಗೆ ಕರೆಸಿದ್ದೀರಿ, ನಮ್ಮ deputy Leaderರವರು ಸಹ ತಮ್ಮ ಕೊಠಡಿಗೆ ಬಂದಿದ್ದರು, ಅಪ್ಪಾಜಿ ನಾಡಗೌಡರವರು ಸಹ ಬಂದಿದ್ದರು, ಮಾನ್ಯ ಮುಖ್ಯಮಂತ್ರಿಗಳು ಸಹ ಬಂದಿದ್ದರು, ಸಂಸದೀಯ ಸಚಿವರು ಸಹ ಅಲ್ಲಿಗೆ ಬಂದಿದ್ದರು. ನೀವು ಅಲ್ಲಿ ಏನು ಹೇಳಿದ್ದೀರಿ, ಅಲ್ಲಿ ನಿಮ್ಮ ಸಲಹೆಯ ಪ್ರಕಾರ ಒಂದು ತೀರ್ಮಾನಕ್ಕೆ ಬಂದೆವು. ಮೊದಲು Question Hourನ್ನು ನಡೆಸೋಣ. ಇವತ್ತು ತಾವು ನಿಯಮ 60ರಲ್ಲಿ ತಂದಿದ್ದೀರಿ. ಆ ಬಗ್ಗೆ ನಾಳೆ ಚರ್ಚೆ ಮಾಡೋಣ ಎಂದಾಗ ನಾವುಗಳು ಒಪ್ಪಿಕೊಂಡಿದ್ದೇವೆ. ಸದನವನ್ನು ಅಡ್ಡಿಪಡಿಸಬೇಕೆಂಬ ಉದ್ದೇಶ ನಮಗೆ ಇಲ್ಲ, ಸದನವು ನಡೆಯಬೇಕು. ಆ ಉದ್ದೇಶ ಇದ್ದಿದ್ದರೆ ನಿಮ್ಮ ಮಾತಿಗೆ ನಾವು ಒಪ್ಪಿಕೊಳ್ಳುತ್ತಾ ಇರಲಿಲ್ಲ. ನಾವು ನಿಮ್ಮ ಮಾತಿಗೆ ಒಪ್ಪಿಕೊಂಡು ಅವರು ಇದನ್ನು regret ವ್ಯಕ್ತಪಡಿಸುತ್ತೇವೆಂದು ಮಾನ್ಯ ಸಂಸದೀಯ ಸಚಿವರು ಇಲ್ಲಿಗೆ ಬಂದು ಹೇಳಿದ ಮೇಲೆ regret ವ್ಯಕ್ತಪಡಿಸುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ, ನೀವು ಚರ್ಚೆಯನ್ನು ಮುಂದುವರೆಸಬೇಕು, Question Hour ಮುಂದುವರಿಯಲಿ ಎಂದು ಹೇಳಿದ ಮೇಲೆ ನಾವುಗಳು ಒಪ್ಪಿಕೊಂಡು ಬಂದ ಮೇಲೆ ಮತ್ತೆ ತಕರಾರು ಏಕೆ? ಒಬ್ಬೊಬ್ಬ ಮಂತ್ರಿಗಳು ಒಂದೊಂದು statement ಕೊಡುವುದಾದರೆ, ಮುಖ್ಯಮಂತ್ರಿಗಳು ಹಾಗೂ ಸಂಸದೀಯ ಮಂತ್ರಿಗಳು ಅಲ್ಲಿಗೆ ಬಂದು ಒಪ್ಪಿಕೊಂಡು ಬಂದಿರುವುದಕ್ಕೆ, ನೀವು ಅಲ್ಲಿ ತೀರ್ಮಾನ ಮಾಡಿರುವುದಕ್ಕೆ

ಮರ್ಯಾದೆ ಇಲ್ಲವೇ, ಗೌರವವಿಲ್ಲವೇ? ಈ ಬಗ್ಗೆ ದಯಮಾಡಿ ಹೇಳಬೇಕು. ಇಲ್ಲಿ ನಾವು ಏನು ಹೇಳಲಿಲ್ಲ. ಮುಂದೇ ಈ ರೀತಿಯಾದ ಸಂಪ್ರದಾಯಗಳು ಆಗಬಾರದು ಎಂದು ನಾವು ಹೇಳಿದ್ದೇವೆ. ಇಲ್ಲಿಗೆ ಬಂದ ಮೇಲೆ ಒಬ್ಬೊಬ್ಬರು ಒಂದೊಂದು ಹೇಳುವುದಾದರೆ ಅವರಿಗೆ ಸದನವನ್ನು ನಡೆಸಬೇಕೆಂಬ ಸದುದ್ದೇಶವಿದ್ದರೆ ನಾವು ಕೂಡ ಅದಕ್ಕೋಸ್ಕರ ಹೇಳುತ್ತಿದ್ದೇವೆ. ಸದನವು ನಡೆಯಬೇಕು. ಇಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು. ಸದನಕ್ಕೆ ಅಡ್ಡಿಪಡಿಸಬಾರದೆಂಬ ಕಾರಣಕ್ಕೆ ನಿಮ್ಮ ಮಾತಿಗೆ ನಾವು ಒಪ್ಪಿಕೊಂಡು ಬಂದಿದ್ದೇವೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ತಮ್ಮ ಅಭಿಪ್ರಾಯವನ್ನು ತಾವು ಹೇಳಿದ್ದೀರಿ. ಈಗ ನಾನು 10 minutes adjourn ಮಾಡುತ್ತೇನೆ. ನಂತರ ಮತ್ತೆ ಸಭೆಯನ್ನು ಸೇರೋಣ.

(ಸದನವು 4 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 10 ನಿಮಿಷದ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

5–30 PM

ಸದನವುಪುನಃ ಸಂಜೆ 5.32 ಗಂಟೆಗೆ ಸಮಾವೇಶಗೊಂಡಿತು

[ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿದ್ದರು]

[ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು]

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮಾನ್ಯ ಮುಖ್ಯಮಂತ್ರಿ]:– ಮಾನ್ಯ ಅಧ್ಯಕ್ಷರೆ, ಇವತ್ತಿನ ಅನಿರೀಕ್ಷಿತ ಘಟನೆಗಳ ಬಗ್ಗೆ ಈಗಾಗಲೇ ಮಾನ್ಯ ಸುರೇಶ್‌ಕುಮಾರ್‌ರವರು ವಿಷಾದ ವ್ಯಕ್ತಪಡಿಸಿದ್ದಾರೆ. ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡುತ್ತೇನೆ. ಮಾನ್ಯ ಶಾಸಕರಾದ ಶಂಕರಲಿಂಗೇಗೌಡರು ಬಳಸಿದ ಶಬ್ದಗಳು ಯಾವುವು ಇವೆ, ಅವುಗಳಲ್ಲಿ ಸರಿ ಇಲ್ಲದಿರುವುದನ್ನು ತಾವು ದಯಮಾಡಿ ತೆಗೆದು ಹಾಕಬೇಕು. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಕುರ್ಚಿಗಳಿಗೆ ತೆರಳಬೇಕೆಂದು ನಮ್ಮ ಎಲ್ಲಾ ಕಾಂಗ್ರೆಸ್ ಮಿತ್ರರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಶಬ್ದಗಳು ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು....

ಶ್ರೀ ಸಿದ್ದರಾಮಯ್ಯ [ವಿರೋಧ ಪಕ್ಷದ ನಾಯಕರು]: ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಜನಾರ್ದನ ರೆಡ್ಡಿಯವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ.

"ಮಾನ್ಯ ಶಂಕರಲಿಂಗೇಗೌಡರು ಏನು ಆರೋಪ ಮಾಡಿದರು ಎಂದು ನೀವೆಲ್ಲರೂ ಬಾವಿಗೆ ಬಂದಿದ್ದೀರಿ? ಇವರು ಬಾವಿಗೆ ಬಂದಿರುವ ಕಾರಣ 2000 ಮಂದಿ ಸೇರಿ ಮೈಸೂರಿನಲ್ಲಿ ಗಲಾಟೆ ಮಾಡಿ ACP ಸುರೇಶ್

ಕುಮಾರ್‌ರವರಿಗೆ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಗಾಯಗಳಾಗಿವೆ. ಇವತ್ತು ಪೊಲೀಸ್‌ರಿಂದ ಲಾಠಿ ಪ್ರಹಾರವಾಗುತ್ತಿದೆ. ಗಾಳಿಯಲ್ಲಿ ಗುಂಡು ಹಾರಿಸುತ್ತಿದ್ದಾರೆ. ಪ್ರಚೋದನೆಯನ್ನು ನೀವೇ ಇವಾಗ ಮಾಡುತ್ತಿದ್ದಿರಿ. ಬಾವಿಯಲ್ಲಿ ನೀವು ಬರುವುದರಿಂದ ಅಲ್ಲಿ ಜನಗಳಿಗೆಲ್ಲಾ ಪ್ರಚೋದನೆ ಆಗಿದೆ."

ಎಂದು ಅವರು ಹೇಳಿದ್ದಾರೆ. ಒಬ್ಬ ಮಮತ್ರಿಗಳಾಗಿ 'ನೀವು ಬಾವಿಯಲ್ಲಿ ಬಂದಿರುವುದರಿಂದಲೇ ಜನರಿಗೆ ಪ್ರಚೋದನೆಯಾಗಿದೆ' ಎಂದರೆ ಹೇಗೆ? ಬೆಳಿಗ್ಗೆ ಉತ್ತರ ಕೊಡುವಾಗ 'ಅಲ್ಲಿ ಎಲ್ಲಾ ಶಾಂತವಾಗಿದೆ, ಅಲ್ಲಿ 144 ಸೆಕ್ಷನ್ ಜಾರಿಯಲಿಲ್ಲ' ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಇವತ್ತೂ ಕುಡ ಅಲ್ಲಿ 'ಶಾಂತಿ' ಬೇಕು ಎನ್ನುವವರಾಗಿದ್ದೇವೆ. ಇವತ್ತೂ ಕೂಡ ಯಾರ್ಯಾರು ಅಲ್ಲಿ ಶಾಂತಿ ಕದಡುತ್ತಿದ್ದಾರೆ, ಯಾರ್ಯಾರು ಸಾಮರಸ್ಯ ಹಾಳು ಮಾಡುತ್ತಿದ್ದಾರೆ, ಅವರ ಮೇಲೆ ಸರ್ಕಾರ ಕಾನೂನು ರೀತಿ ಎಷ್ಟೇ ಕಠಿಣ ಕ್ರಮವನ್ನು ತೆಗೆದುಕೊಂಡರೂ ಕೂಡ, ನಾವು ನಿಮಗೆ ಈ ದಿಸೆಯಲ್ಲಿ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ, ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತೇವೆ. ನಮಗೆ ಅಲ್ಲಿ ಶಾಂತಿ ನೆಲಸಬೇಕು. ಮೈಸೂರು ಒಂದು ಸಾಂಸ್ಕೃತಿಕ ನಗರ, ಪ್ರವಾಸೋದ್ಯಮದಿಂದ ಹೆಚ್ಚು ಜನರನ್ನು ಆಕರ್ಷಣೆ ಮಾಡತಕ್ಕ ನಗರ. ಮುಂದಿನ ಎರಡು ತಿಂಗಳಿನಲ್ಲಿ ದಸರಾ ಪ್ರಾರಂಭವಾಗುತ್ತಿದೆ. ಲಕ್ಷಾಂತರ ಜನ ದೇಶ ವಿದೇಶಗಳಿಂದ ಮೈಸೂರು ನಗರಕ್ಕೆ ಆಗ ಬರುತ್ತಾರೆ. ಇವತ್ತು ಆ ಗಲಭೆ ನಿಲ್ಲಬೇಕು. ಈಗಾಗಲೇ ಒಂದು ವಾರವಾಗಿದೆ. 2ನೇ ತಾರೀಖಿನಿಂದ ಪ್ರಾರಂಭವಾಗಿ ಇವತ್ತು 9ನೇ ತಾರೀಖಿನವರೆಗೆ ಅಲ್ಲಿ ಗಲಭೆ ನಡೆಯುತ್ತಿದೆ. ಪರಿಸ್ಥಿತಿ normalcyಗೆ ಬಂದಿತು ಎಂದು ನಾವು ಸಂತೋಷಗೊಂಡಿದ್ದೆವು. ಇವತ್ತು ಇಲ್ಲಿ ನಾವು ಚರ್ಚೆ ಮಾಡಿದೆವು ಎಂಬ ಕಾರಣಕ್ಕೋಸ್ಕರ ಅಲ್ಲಿ ಗಲಾಟೆಯಾಗುತ್ತಿದೆ ಎಂದು ಸರ್ಕಾರ ಹೇಳಿಕೆ ಕೊಟ್ಟರೆ ಹೇಗೆ? ನಾವು ಏಕೆ ವಿರೋಧ ಪಕ್ಷದಲ್ಲಿ ಇರಬೇಕು? ಇಂತಹ ವಿಚಾರಗಳನ್ನು ನಾವಿಲ್ಲಿ ಪ್ರಸ್ತಾಪ ಮಾಡದಿದ್ದರೆ ನಮ್ಮ ಬಗ್ಗೆ ಜನ ಏನು ತಿಳಿದುಕೊಳ್ಳುತ್ತಾರೆ? ಅಲ್ಲಿ ಏನು ನಡೆದಿದೆ ಎಂಬುದನ್ನು ಹೇಳತಕ್ಕ ಹಕ್ಕು ನಮಗೂ ಕೂಡ ಇರುತ್ತದೆ. ನಾವು ಮಾತನಾಡುವುದರಿಂದಲೇ ಪ್ರಚೋದನೆ ಆಗುತ್ತದೆ ಎನ್ನುವುದಾದರೆ ವಿಧಾನ ಸಭೆಯಲ್ಲಿ ಯಾವುದನ್ನೂ ಸಹ ಚರ್ಚೆ ಮಾಡಲಿಕ್ಕಾಗುವುದಿಲ್ಲ. ಈ ಹಿಂದೆ ಈ ತರಹದ ಅನೇಕ ಘಟನೆಗಳು ನಡೆದಾಗ, ಆ ಬಗ್ಗೆ ಇಲ್ಲಿ ಚರ್ಚೆಯಾಗಿದೆ, ಸರ್ಕಾರ ಅದಕ್ಕೆ ಉತ್ತರ ಕೊಟ್ಟಿದೆ. ಎಲ್ಲಾ ಕಡೆ ಆದಂತಹ ಘಟನೆಗಳು ಇಲ್ಲಿ ಚರ್ಚೆಯಾಗಿವೆ. ಹುಬ್ಬಳ್ಳಿಯಲ್ಲಿ ಆದಂತಹ ಘಟನೆ ಇರಬಹುದು, ಉಡುಪಿಯಲ್ಲಿ ಆದಂತಹ ಘಟನೆ ಇರಬಹುದು, ಮಂಗಳೂರಿನಲ್ಲಿ ಆದಂತಹ ಘಟನೆ ಇರಬಹುದು. ಯಾವ್ಯಾವ ಕಡೆಗಳಲ್ಲಿ ಇಂತಹ ಘಟನೆಗಳಾಗಿವೆ, ಅವುಗಳ ಬಗ್ಗೆ ವಿರೋಧ ಪಕ್ಷದವರು ಇಲ್ಲಿ ಚರ್ಚೆ ಮಾಡಿದ್ದಾರೆ, ಸರ್ಕಾರ ಅದಕ್ಕೆ ಉತ್ತರ ಕೊಟ್ಟಿದೆ. ಯಾರು ಕಾನೂನು ಕೈಗೆ ತೆಗೆದುಕೊಂಡು ಸಮಾಜದಲ್ಲಿ ಅಶಾಂತಿ

O-105Y-10

ಉಂಟು ಮಾಡುತ್ತಾರೋ, ಗಲಭೆ ನಡೆಯಲು ಪ್ರಚೋದನೆ ಮಾಡುತ್ತಾರೋ, ಅವರನ್ನು ಹತ್ತಿಕ್ಕಬೇಕು. ನಿಮ್ಮ ಬಳಿ ಪೊಲೀಸ್ ಇದೆ, intelligence ಇದೆ, enquiry ಮಾಡತಕ್ಕ ಎಲ್ಲಾ ವ್ಯವಸ್ಥೆಗಳಿವೆ. ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಿ. we have no objection. we will fully co-operate. ಅದನ್ನು ಬಿಟ್ಟು 'ನೀವು ಇಲ್ಲಿ ಮಾತನಾಡುವುದರಿಂದಲೇ, ಬಾವಿಗೆ ಬಂದಿರುವುದರಿಂದಲೇ ಪ್ರಚೋದನೆಯಾಗುತ್ತಿದೆ' ಎಂದು ಹೇಳತಕ್ಕದ್ದು ಎಷ್ಟು ಸಮಂಜಸವಾಗುತ್ತದೆ ಎಂಬುದನ್ನು ಹೇಳಿ ನೋಡೋಣ. ಇದು ಸರ್ಕಾರ ಹೇಳತಕ್ಕ ರೀತಿಯೇ? ಸರ್ಕಾರ ಈ ತರಹದ ಹೇಳಿಕೆಗಳನ್ನು ಕೊಡತಕ್ಕದ್ದು ಸರಿಯೇ? ಮಾನ್ಯ ಮುಖ್ಯಮಂತ್ರಿಗಳಾದ ನೀವು ಹಿಂದೆ ಬಹಳ ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದೀರಿ. ಹಿಂದೆ ಯಾವ ಸರ್ಕಾರವೇ ಇರಲಿ, ನೀವು ಈ ರೀತಿ ಚರ್ಚೆ ಮಾಡಿದಾಗ, ಅಲ್ಲಿ ಪ್ರಚೋದನೆ ಆಗುತ್ತದೆಂದು ಹೇಳಿದ್ದರಾ? ಎಂಬುದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಮಾನ್ಯ ಜನಾರ್ದನ ರೆಡ್ಡಿಯವರು ಕೂಡ ಒಬ್ಬ ಜವಾಬ್ದಾರಿಯುತ ಮಂತ್ರಿಗಳಾಗಿದ್ದಾರೆ. ಸರ್ಕಾರದಲ್ಲಿರುವ ಎಲ್ಲರಿಗೂ joint responsibility ಇದೆ ಎಂಬುದು ನನಗೆ ಗೊತ್ತು. ಆದರೆ ಮಾತನಾಡುವಾಗ ವಿರೋಧ ಪಕ್ಷದವರ ಬಗ್ಗೆ ಈ ರೀತಿ ಗೂಬೆ ಕೂರಿಸತಕ್ಕ ಕೆಲಸ ಮಾಡತಕ್ಕದ್ದು ಇದೆಯಲ್ಲಾ, ಇದು ಸರಿಯಲ್ಲ. ಸರ್ಕಾರ ನೇರವಾಗಿ ಈ ತರಹದ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡಬಾರದು. ಮಾನ್ಯ ಜನಾರ್ದನ ರೆಡ್ಡಿಯವರು ಹೇಳಿರತಕ್ಕದ್ದು ಕಡತಕ್ಕೆ ಹೋಗಿದೆ. It is on record. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದರು. ನಿಮ್ಮ ಎದುರಿಗೇ ಈ ರೀತಿ ಹೇಳಿದರೆ ಹೇಗೆ? you are Leader of the House. You are heading the Government. ನಾವು ಇದನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ನೀವು ಹೇಳಬೇಕು, ಯಾರಾದರೂ ಎದ್ದು ಏನಾದಾರೂ ಮಾತನಾಡಬಹುದಾ? ನಾನು ಮಂತ್ರಿಗಳು ಹೇಳಿಕೆ ಮಾಡುವುದಕ್ಕೆ ಅಡ್ಡಬರುವುದಿಲ್ಲ. ನಾನು ಹೇಳಬಹುದಲ್ಲಾ? ಸರ್ಕಾರದ ಕುಮ್ಮಕ್ಕಿನಿಂದ ಅಲ್ಲಿ ನಡೆಯುತ್ತಿದೆ ಎಂದು ನಾನು ಹೇಳುವುದಕ್ಕಾಗುತ್ತದೆಯೇ? Can I make a statement like this? I should not. ಸಲ್ಯೂಷನ್ ಹುಡಕಬೇಕು, ಪರಿಹಾರ ಹುಡುಕುವುದಕ್ಕೋಸ್ಕರವೇ ನಾವೆಲ್ಲಾ ಇಲ್ಲಿ ಚರ್ಚೆ ಮಾಡುವುದು. ಪರಿಹಾರ ಸಿಗಬೇಕು, ಅಲ್ಲಿಯ ಜನರಿಗೆ ನೆಮ್ಮದಿ ಸಿಗಬೇಕು, ಶಾಂತಿ ಸಿಗಬೇಕು, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಬೇಕು. ನಾನು ಅಲ್ಲಿ ಮೂರು ದಿವಸವಿದ್ದೆ, ಅಲ್ಲಿ ಡಿಜಿಪಿ ಇದ್ದರು, ಅವತ್ತಿನ ದಿವಸ ಅವರಿಗೂ ಕೂಡ ನಾನು ಫೋನ್ ಮಾಡಲಿಲ್ಲ, ಬರುವುದು ಬೇಡ ಸರ್ ಎಂದು ನನಗೆ ಪತ್ರ ಬರೆದರು, 144 ಸೆಕ್ಷನ್ ಹಾಕಿದ ಜಾಗಕ್ಕೆ ನಾನು ಹೋಗಲೇ ಇಲ್ಲ, ಮನೆ ಬಿಟ್ಟುಹೊರಗಡೆ ಹೋಗಲೇ

ಇಲ್ಲ. ನಮ್ಮದೆಲ್ಲಾ ಪೂರ್ಣ ಸಹಕಾರವಿರಬೇಕು, ಶಾಂತಿ ನೆಲಸಬೇಕು ಎನ್ನುವ ಕಾರಣಕ್ಕೆ ಆ ರೀತಿ ಮಾಡಿದ್ದೇವೆ. ನಮ್ಮ ತನ್ವೀರ್ ಸೇಠ್ ಅವರಿಗೂ ಕೂಡ, ನೀವು ಅಲ್ಲಿಗೆ ಬರಬೇಡಿ ಹೊರಗಡೆ ಹೋಗಿ ಎಂದು ಹೇಳಿದರು, ಪಾಪ, ಇವರು ಕ್ಷೇತ್ರದ ಒಳಗಡೆ ಹೋಗಲೇ ಇಲ್ಲ. ನಿರಾಧಾರವಾದ ಆರೋಪಗಳನ್ನು ಮಾಡುವುದಿದೆಯಲ್ಲಾ, ನಿಮ್ಮ ಸರ್ಕಾರಕ್ಕೆ ಶೋಭೆ ತರುತ್ತದೆ ಎನ್ನುವುದಾದರೆ ಮಾಡಿ, ನೀವು ಮಾಡಿದರೆ, ನಾವು ಮಾಡುತ್ತೇವೆ Where it will be ended? ನಾವು ಅಸೆಂಬ್ಲಿ ನಡೆಯಬೇಕೆನ್ನುವ ಉದ್ದೇಶದಿಂದಲೇ ನಿಮ್ಮ ಸಮ್ಮುಖದಲ್ಲಿ ಬಂದು ಒಪ್ಪಿಕೊಂಡಿದ್ದೇವೆ, ಮುಖ್ಯಮಂತ್ರಿಗಳು, ಸಂಸದೀಯ ಮಂತ್ರಿಗಳು ಮತ್ತು ಗೃಹ ಸಚಿವರು ಕೂಡ ಇದ್ದರು. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ, ಆ ವಿಷಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಿ. ಆ ಸದಸ್ಯರೇನು ಹೇಳಿದ್ದಾರೆ, ಅವರಿಂದ ವಿಷಾದ ವ್ಯಕ್ತಪಡಿಸುತ್ತೇವೆಂದು ಸುರೇಶ್ ಕುಮಾರ್ ಅವರು ಹೇಳಿದ್ದಾರೆ. "ಅವರು ವಿಷಾದವನ್ನು ವ್ಯಕ್ತಪಡಿಸುತ್ತಾರೆ, ನೀವು ಕ್ಷಮೆ ಕೇಳುವುದನ್ನು ಬಿಟ್ಟುಬಿಡಿ, ಇವತ್ತು ಚರ್ಚೆ ಬೇಡ, ನಾಳೆ ಸದನವನ್ನು ಬೆಳಿಗ್ಗೆ 10-00 ಗಂಟೆಗೆ ಕರೆಯುತ್ತೇವೆ, 10-11 ಗಂಟೆಯವರೆಗೆ ಪ್ರಶ್ನೋತ್ತರವಿರುತ್ತದೆ, ನೀವು 11 ಗಂಟೆಯ ಮೇಲೆ ಪ್ರಸ್ತಾಪ ಮಾಡಿ ಎಂದು ಹೇಳಿದ ಮೇಲೆ ನಾವು ಸದನ ನಡೆಯಬೇಕೆನ್ನುವ ಕಾರಣಕ್ಕೋಸ್ಕರವಾಗಿ ಒಪ್ಪಿಕೊಂಡು ಬಂದಿದ್ದೇವೆ. ಸದನ ನಿಲ್ಲಬಾರದು, ನಮ್ಮಿಂದ ಆಡಚಣೆಯಾಗಬಾರದು, ಈ ರಾಜ್ಯದ ಜನರಿಗೆ ತಪ್ಪು ಸಂದೇಶ ಹೋಗಬಾರದು ಎನ್ನುವ ಕಾರಣಕ್ಕೋಸ್ಕರ ನಾವು ಒಪ್ಪಿಕೊಂಡು ಬಂದಿದ್ದೇವೆ, ಇದೆಲ್ಲಾ ನಿಮ್ಮ ಎದುರಿಗೆ ನಡೆದಂತಹದ್ದು. ಮುಖ್ಯಮಂತ್ರಿಗಳು ಕೂಡ ಅಲ್ಲಿ ಹಾಜರಿದ್ದರು, ಮಾನ್ಯ ಅಧ್ಯಕ್ಷರೆ ನೀವು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ[ಮಾನ್ಯ ಮುಖ್ಯಮಂತ್ರಿಗಳು]: ನಾನು ಪ್ರತಿಪಕ್ಷದ ನಾಯಕರ ಮಾತಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಸರ್ಕಾರದ ಮೊದಲ ಆದ್ಯ ಕರ್ತವ್ಯ. ಕಾನೂನು ಸುವ್ಯವಸ್ಥೆಗೆ ಭಂಗ ತರುವಂಥ ಯಾವುದೇ ವ್ಯಕ್ತಿ ಯಾವುದೇ ಸಂಘಟನೆಯಾಗಿರಲಿ ಅಷ್ಟು ಸುಲಭವಾಗಿ ಈ ರಾಜ್ಯದ ವಾತಾವರಣವನ್ನು ಕೆಡಿಸುವುದಕ್ಕೆ ಬಿಡುವುದಿಲ್ಲ. ವಿರೋಧಪಕ್ಷದ ನಾಯಕರಾದ ಸಿದ್ಧರಾಮಯ್ಯನವರು ಹೇಳಿದಂತೆ, ಇಂತಹ ಘಟನೆಗಳು ನಡೆದಂಥ ಸಂದರ್ಭದಲ್ಲಿ ಕೆಲವೇ ಗಂಟೆಗಳಲ್ಲಿ ಧಾವಿಸಬೇಕಾದ ನಾನು, ಅಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳು, ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದರೂ ಕೂಡ ನೀವು ಆ ಏರಿಯಾಗಳಿಗೆ ಹೋಗುವುದಕ್ಕಾಗುವುದಿಲ್ಲ, ಆದುದರಿಂದ ನೀವು 4 ದಿವಸ ಬರಬೇಡಿ ಎಂದು ಹೇಳಿದರು. ತತಕ್ಷಣ ಗೃಹ ಸಚಿವರು ಹೋಗಿದ್ದರು, ಏನು ಗಮನಿಸಬೇಕೋ ಅದನ್ನು ಮಾಡಿಕೊಂಡು ಬಂದರು. 2ನೇ ತಾರೀಖು ಮೈಸೂರಿನಲ್ಲಿ ಪ್ರಾರಂಭವಾದ ಈ ಘಟನೆಗಳು, ಕೋಮುಗಲಭೆ ನಂತರ ಶಾಂತಿ ಸ್ಥಿತಿಗೆ ಬಂತು, ಕಳೆದ 5 ದಿವಸಗಳಿಂದ ಯಾವುದೇ ಘಟನೆಗಳು ನಡೆದಿಲ್ಲ. ನಮ್ಮ

ADGP, DGP, ಗೃಹ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಬಂದ ತಕ್ಷಣ ಅವರು ಅಲ್ಲಿ ಹೋಗಿ, ಶಾಂತ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ನಮ್ಮ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ದುಷ್ಕರ್ಮಿಗಳು, ಸಮಾಜ ಘಾತುಕರನ್ನು ನಿರ್ದಾಕ್ಷಿಣ್ಯವಾಗಿ ಬಂಧಿಸಿದ್ದೇವೆ. ಈ ದಿವಸದ ಮಧ್ಯಾಹ್ನದವರೆಗೆ ಯಾವುದೇ ಗಲಾಟೆಗಳು, ಗಲಭೆಗಳು ಅಗಿರುವುದಿಲ್ಲ. ಆದರೆ ಈ ದಿವಸ ಬೆಳಿಗ್ಗೆ ಮೈಸೂರಿನಲ್ಲಿ Popular Front of India ವತಿಯಿಂದ 144 ಸೆಕ್ಷನ್ ಇದ್ದರೂ ಕೂಡ ಜೈಲ್‌ಭರೋ ಚಳುವಳಿಯನ್ನು ಹಮ್ಮಿಕೊಂಡಿದರು. ಮೂರು ಜನರ ಒಂದು ತಂಡ Motor Vehicleನಲ್ಲಿ ಹೋಗಿ ಅಲ್ಲಿ ದೇವರ ಮೆರವಣಿಗೆಯ ಮೇಲೆ ಕಲ್ಲುಗಳಿಂದ ತೂರಾಟ ಮಾಡಿದೆ. ನಮ್ಮ ಉನ್ನತ ಪೋಲಿಸ್ ಅಧಿಕಾರಿಯಾದ ACP ಸುರೇಶ್ ಅವರಿಗೆ ಏಟು ಬಿದ್ದಿರುವಂತಹ ಈ ಘಟನೆಗಳು ನಡೆದಿವೆ. ಈಗಾಗಲೇ Popular Front of India ಪರವಾಗಿ ಒಂದರಿಂದ ಒಂದುಕಾಲು ಸಾವಿರ ಜನರವರೆಗೆ ಸೇರಿಗೊಂದಲವನ್ನುಂಟು ಮಾಡುವ ಪ್ರಯತ್ನವನ್ನು ಮಾಡಿದರು, ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದರು. ಇಂತಹ ಸಂದರ್ಭದಲ್ಲೂ ಕೂಡ ನಮ್ಮ ಎಲ್ಲಾ ಅಧಿಕಾರಿಗಳು ಅಲ್ಲಿಗೆ ಧಾವಿಸಿ ಹೋಗಿದ್ದಾರೆ, ಪರಿಸ್ಥಿತಿ ಹತೋಟಿಗೆ ಬರುತ್ತಿದೆ. ನಾನು ಮೈಸೂರಿನ ಜನತೆಯಲ್ಲಿ ವಿನಂತಿ ಮಾಡುವುದೇನೆಂದರೆ, ಯಾವುದೇ ಉಹಾಪೋಹದ ಸುದ್ದಿಗೆ ಕಿವಿಕೊಡಬೇಡಿ, ನಿಮ್ಮ ರಕ್ಷಣೆಯ ಜವಾಬ್ದಾರಿ ಸರ್ಕಾರದ ಮೇಲಿದೆ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಾವು ಆದ್ಯತೆಯನ್ನು ಕೊಡುತ್ತಿದ್ದೇವೆ. ಯಾರು ಎಷ್ಟೇ ದೊಡ್ಡವರಾಗಿದ್ದರೂ, ಈ ಗಲಭೆಗಳನ್ನು ಮಾಡುವಂತಹ ಷಡ್ಯಂತರವನ್ನು ಸರ್ಕಾರ ಸಹಿಸುವುದಿಲ್ಲ. ಇವತ್ತು ಈ ಚರ್ಚೆ ಪ್ರಾರಂಭವಾಗಿದೆ, ನಾನು ಪ್ರತಿಪಕ್ಷದ ನಾಯಕರ ಜೊತೆ ಕೂಡ ಮಾತನಾಡುತ್ತೇನೆ, ಅಧ್ಯಕ್ಷರೆ, ನಾನು ನಿಮ್ಮ ಹತ್ತಿರ ಕೂಡ ಬಂದು ಮಾತನಾಡುತ್ತೇನೆ, ವಾತಾವರಣವನ್ನು ತಿಳಿಯಾಗುವುದನ್ನು ನಾವು ನೀವು ಒಟ್ಟಾಗಿ ಸೇರಿ ಮಾಡಬೇಕಾಗಿದೆ. ವಿರೋಧಪಕ್ಷ, ಆಳುವ ಪಕ್ಷ ಎಂಬುದು ವ್ಯವಸ್ಥೆ ಮಾತ್ರ, ಡೆಮಾಕ್ರಸಿನಲ್ಲಿ ಯಾರು ಎಲ್ಲಿಬೇಕಾದರೂ ಕುಳಿತುಕೊಳ್ಳಬಹುದು. ಆದರೆ ಅಧಿಕಾರವಿದ್ದಾಗ, ವಿರೋಧಪಕ್ಷ ಆಳುವ ಪಕ್ಷ ಒಟ್ಟಾಗಿ, ಈ ನಾಡಿನ ಶಾಂತಿ ಕಾಪಾಡುವುದಕ್ಕೆ, ಈ ನಾಡಿನ ಅಭಿವೃದ್ಧಿ ಕಾರ್ಯದ ಕಡೆಗೆ ಗಮನ ಕೊಡಬೇಕೆಂದು ಜನತೆ ಅಪೇಕ್ಷೆಪಟ್ಟಿದ್ದಾರೆ. ಇವತ್ತು ಮೊದಲನೆ ದಿವಸ ಅಧಿವೇಶನ ಆರಂಭವಾಗಿದೆ, ಇಡೀ ರಾಜ್ಯದ ಜನರ ಗಮನ ಈ ಕಡೆ ಇದೆ, ಮಾಧ್ಯಮದ ಸ್ನೇಹಿತರು Electronic Media, ಗಂಭೀರವಾದ ಚರ್ಚೆ ನಡೆಯುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ, ಅದನ್ನು ನಾವು ಪ್ರತಿಪಕ್ಷದಿಂದ ನಿರೀಕ್ಷೆ ಮಾಡುವುದು, ಅದೇ ರೀತಿ ಸಹಕಾರವನ್ನು ಕೊಡುವುದು ಆಡಳಿತ ಪಕ್ಷದವರ ಕರ್ತವ್ಯ. ಆದುದರಿಂದ ಇವತ್ತೇನು ಘಟನಾವಳಿಗಳು ನಡೆದಿವೆ, ಆ ಬಗ್ಗೆ ಚರ್ಚಿಸಲು ನಮ್ಮ ಶಾಸಕ ಮಿತ್ರರೆಲ್ಲಾ ಇವತ್ತು ಸಂಜೆ ಸೇರುತ್ತಿದ್ದೇವೆ, ನಾವು

ಕೂಡ ಆ ಇತಿಮಿತಿಗಳನ್ನು ದಾಟಬಾರದೆನ್ನುವ ಸೂಚನೆಯನ್ನು ಕೊಡುತ್ತೇನೆ, ನೀವು ನಿಮ್ಮ ಶಾಸಕರಿಗೆ ಹೇಳಿ. ಒಂದು ಮಾತನ್ನು ನಾನು ವಿರೋಧಪಕ್ಷದ ನಾಯಕರಿಗೆ, ನಮ್ಮ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ತಾವು ಪ್ರತಿಪಕ್ಷದಲ್ಲಿದ್ದು ಈ ಸರ್ಕಾರವನ್ನು ಎಚ್ಚರಿಸುವುದಕ್ಕೆ, ಮಾರ್ಗದರ್ಶನ ಮಾಡುವುದಕ್ಕೆ ಇರುವುದು, ಟೀಕೆ ಮಾಡುವುದಕ್ಕೆ ತಾವು ಇರುವುದು, ಅದನ್ನು ನಾವು ಸಹಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ, ಅದು ನಮ್ಮ ಕರ್ತವ್ಯವೂ ಸಹ. ಆದರೆ ಕಾನೂನು ಚೌಕಟ್ಟನ್ನು, ಇತಿಮಿತಿಗಳನ್ನು, ನೀವು ದಾಟಬಾರದು ನಾವು ದಾಟಬಾರದು, ಆ ಎಚ್ಚರಿಕೆಯನ್ನು ವಹಿಸಿಕೊಂಡು ಮುಂದೆ ಹೋಗೋಣ. ಇವತ್ತೇನು ಘಟನಾವಳಿಯಾಗಿದೆ ಅದು ಮರುಕಳಿಸದಂತೆ ನಮ್ಮ ಶಾಸಕರ ಜೊತೆಯಲ್ಲಿ ಮಾತನಾಡುತ್ತೇನೆ. ಈಗಾಗಲೇ ಸುರೇಶ್ ಕುಮಾರ್ ಅವರು ಈ ಘಟನಾವಳಿಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ, ಶಂಕರಲಿಂಗೇ ಗೌಡರೇನು ಮಾತನಾಡಿದ್ದಾರೆ, ಅಧ್ಯಕ್ಷರೆ, ಅದನ್ನು ಕಡತದಿಂದ ತೆಗೆಸಲು ಯಾವಾಗಲೂ ನಿಮಗೆ ಅಧಿಕಾರವಿದೆ. ನಾನು ಮತ್ತೊಮ್ಮೆ ಪ್ರತಿಪಕ್ಷದ ನಾಯಕರಲ್ಲಿ ವಿನಂತಿಸುತ್ತೇನೆ. ಅಧ್ಯಕ್ಷರೆ, ದಾಖಲೆ ತೆಗೆಸುವುದು ಬಿಡುವುದು ನಿಮಗೆ ಬಿಟ್ಟದ್ದು, ದಯಮಾಡಿ ಇವತ್ತು ಶಾಂತ ಸ್ಥಿತಿಗೆ ಬರುತ್ತಿರುವ ಮೈಸೂರಿನಲ್ಲಿ, ಇವತ್ತು ನಮ್ಮ ಎಲ್ಲಾ ಅಧಿಕಾರಿಗಳೊಡನೆ, ಸುತ್ತಮುತ್ತಲಿನ ಚುನಾಯಿತ ಪ್ರತಿನಿಧಿಗಳೊಡನೆ ಸುಮಾರು ಒಂದು ಗಂಟೆ, ದಸರವನ್ನು ನಾಡಹಬ್ಬವಾಗಿ ಇನ್ನು ವಿಜೃಂಭಣೆಯಿಂದ ಆಚರಿಸಬೇಕೆಂದು ಚರ್ಚೆ ಮಾಡಿದ್ದೇವೆ, ಇದಕ್ಕೆ ವಿರೋಧಪಕ್ಷ ನಾಯಕರಾದ ಸಿದ್ಧರಾಮಯ್ಯನವರೆ, ನಿಮ್ಮ ಸಹಕಾರವು ಕೂಡ ಬೇಕು. ನಾವೆಲ್ಲಾ ಸೇರಿ ಅಲ್ಲಿ ವಿಜೃಂಭಣೆಯಿಂದ ದಸರಾ ಉತ್ಸವವನ್ನು ಮಾಡಬೇಕು, ಯಾವುದೇ ಕೋಮಿನ ಜನರು ಒಂದೇ ತಾಯಿಯ ಮಕ್ಕಳೆಂದು ಅಲ್ಲಿ ಬಾಳಬೇಕು, ಉದ್ದೇಶಪೂರ್ವಕವಾಗಿ ಶಾಂತಿಯನ್ನು ಕೆಡಿಸುವ ಪ್ರಯತ್ನವನ್ನು ಯಾವ ದುಷ್ಟಶಕ್ತಿಗಳು ಮಾಡುತ್ತವೆ, ಅವುಗಳ ವಿರುದ್ಧ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ ಮತ್ತೆ ಮೈಸೂರಿನ ಸುತ್ತಮುತ್ತಲಿನ ಜನತೆಗೆ ನಾನು ಭರವಸೆಯನ್ನು ಕೊಡುತ್ತೇನೆ, ಯಾವುದಕ್ಕೂ ಅಂಜದೇ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಿ. ನಾವು ಪೋಲಿಸ್ ಇಲಾಖೆಗೆ, ಯಾರು ಶಾಂತಿ ಸುವ್ಯವಸ್ಥೆಗೆ ಧಕ್ಕೆತರುವಂತಹ ಪ್ರಯತ್ನವನ್ನು ಮಾಡುತ್ತಾರೆ ಅವರ ವಿರುದ್ಧ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಲು ಸೂಚನೆಯನ್ನು ಕೊಟ್ಟಿದ್ದೇವೆ, ಅಂತಹವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯಮಾಡಿ, ತಾವು ಮುಂದಿನ ಕಾರ್ಯಕಲಾಪಕ್ಕೆ ಅನುವು ಮಾಡಿಕೊಡಬೇಕು. ನಾಳೆಯ ಪರಿಸ್ಥಿತಿಯನ್ನು ನೋಡಿ, ಚರ್ಚೆ ಮಾಡುವುವಂತಹ ಯಾವುದೇ ವಿಷಯವಿದ್ದರೂ ಚರ್ಚೆ ಮಾಡುವುದಕ್ಕೆ ರಾತ್ರಿ 8–9 ಗಂಟೆಯವರೆಗೆ ಕುಳಿತುಕೊಳ್ಳೋಣ, ಚರ್ಚೆಯಾಗಬೇಕು ಸತ್ಯ ಹೊರಗೆ ಬರಬೇಕು, ಜನರಿಗೆ ನ್ಯಾಯವನ್ನು ಒದಗಿಸಿಕೊಡಲು ನಾನು ಬದ್ಧನಾಗಿದ್ದೇನೆ, ಅದಕ್ಕೆ ನಾನು, ನಮ್ಮ ಸರ್ಕಾರ

ಬದ್ಧವಾಗಿದೆ, ನೀವು ಕೂಡ ಅದಕ್ಕೆ ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗ ಮುಖ್ಯಮಂತ್ರಿಗಳು ಮಾತನಾಡಿ, ಶಾಂತಿಯನ್ನು ಕಾಪಾಡಬೆಕು, ಅಲ್ಲಿ ಉರಿಯುತ್ತಿರುವ ಬೆಂಕಿ ಶಮನವಾಗುವ ರೀತಿಯಲ್ಲಿ ಸಭೆಯಿಂದ ವರ್ತಮಾನ ಹೋಗಬೇಕೆನ್ನುವ ದಾಟಿಯಲ್ಲಿ ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈಗಾಗಲೇ ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟಿರುವ ರೀತಿಯಲ್ಲಿ, ಈ ಸಭೆಯಲ್ಲಿ ಶಂಕರಲಿಂಗೇ ಗೌಡರು ಮಾತನಾಡಿರಲಿ ಯಾರೇ ಸದಸ್ಯರು ಮಾತನಾಡಿದ್ದರು ಕಡತದಲ್ಲಿ ಇರಬಾರದೆನ್ನುವ ಒಂದು ಸಂದೇಶದ ಜೊತೆಗೆ, ಇದೇನಾಗಿದೆ ಎಂದರೆ, ಒಂದು ಮುಖ್ಯವಾದುದು, ನಿಮ್ಮ ಜಿಲ್ಲಾ ಮಂತ್ರಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಒಂದು ವರದಿ ಬಂತು, PFI KFE ನಿಷೇಧ ಎನ್ನುವ ವರದಿ ಏನು ಬಂದಿತ್ತು, ಅದು ವಿಧಾನ ಸಭೆಯಲ್ಲಿ ಚರ್ಚೆಯಾಗಬೇಕೆಂದು ಪಾಪ ಅವರು ಹೇಳಿದ ಹಿನ್ನೆಲೆಯಲ್ಲಿ ಪತ್ರಿಕೆಯ ಮುಖಪುಟದಲ್ಲಿ ಬಂದಾಗ ಅದು ಪ್ರಚೋದನೆಗೆ ಕಾರಣವಾಗಿರಬಹುದು. ಅದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಮೈಸೂರಿನವರೇ ಆಗಿರುವುದರಿಂದ, ಇಬ್ಬರೂ ಕೂಡ ಜಂಟಿಯಾಗಿ ಶಾಂತಿ ಕಾಪಾಡುವ ರೀತಿಯಲ್ಲಿ ಸಂದೇಶ ಈ ಮನೆಯಿಂದ ಹೋಗಬೇಕು. ಇಬ್ಬರೂ ಕೂಡ ಆ ಜವಾಬ್ದಾರಿಯನ್ನು ಹೊತ್ತು ಶಾಂತಿ ಕಾಪಾಡುವ ರೀತಿಯಲ್ಲಿ ಸಂದೇಶ ಈ ಸದನದ ಮೂಲಕ ಹೋಗಬೇಕೆಂಬುದು ಸೂಕ್ತ ಎಂಬುದು ನನ್ನ ಅಭಿಪ್ರಾಯ.

ಶ್ರೀಮತಿ ಶೋಭಾ ಕರಂದ್ಲಾಜೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಮಾತನಾಡುತ್ತಾ ನಾನು ನೆನ್ನೆ ಹೇಳಿಕೆ ಕೊಟ್ಟಿದ್ದೆ ಅದಕ್ಕಾಗಿ ಇವತ್ತು ಪ್ರಚೋದನೆ ಆಗಿದೆ ಎನ್ನುವಂತಹ ಮಾತನ್ನು ಹೇಳಿದರು. ದಯಮಾಡಿ ಅವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನೆನ್ನೆ ಹೇಳಿರುವಂಥದ್ದು KFD ಯ ಹಲವಾರು ಜನ ಈ ಗಲಭೆಯಲ್ಲಿ ಸಿಕ್ಕಿದ್ದಾರೆ ಇವತ್ತು ಪೋಲಿಸ್‌ನವರು ಏನು ರಿಪೋರ್ಟ್ ಕೊಟ್ಟಿದ್ದಾರೆ, ಪೋಲಿಸರು ಏನು ಅರೆಸ್ಟ್ ಮಾಡಿದ್ದಾರೆ ಅದರ ಆಧಾರದಲ್ಲಿ ಇವತ್ತು ಆ ಸಂಘಟನೆಯಿಂದ ಗಲಾಟೆ ಆಗಿರುವುದು ಎಂದು ನಾನು ಹೇಳಿರುವಂಥದ್ದು ನಿಜ ಇದೆ. ಇದೇ ಕಾರಣಕ್ಕಾಗಿ ಆ ಸಂಘಟನೆಯನ್ನು ನಿಷೇಧ ಮಾಡಬೇಕಾ ಎಂದು ಪತ್ರಕರ್ತರು ಪ್ರಶ್ನೆ ಕೇಳಿದಾಗ ಇದಕ್ಕೆ ನಾನು ಉತ್ತರ ಹೇಳುವುದಿಲ್ಲವೆಂದು ಹೇಳಿದೆ. ಏಕೆಂದರೆ ನಾಳೆಯಿಂದ ವಿಧಾನಸಭೆ ಅಧಿವೇಶನ ಪ್ರಾರಂಭವಾಗುತ್ತಿರುವುದರಿಂದ ನಾನು ಯಾವುದೇ ಮಾತನ್ನು ಇಲ್ಲಿ ಹೇಳುವುದು ತಪ್ಪಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಆದರೆ ಈಗ ಮತ್ತೆ ಅದನ್ನೆ ಕೆದಕಿ ನನ್ನ ಮೇಲೆ ಆರೋಪ ಹೊರಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಆದ್ದರಿಂದ

ಮಾನ್ಯ ಸಭಾಧ್ಯಕ್ಷರೆ ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕು ಮತ್ತು ಆ ರೀತಿ ಹೇಳಬಾರದು ಎಂದು ಮಾನ್ಯ ಸದಸ್ಯರಿಗೆ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಸಚಿವೆಯವರ ಮೇಲೆ ಆರೋಪ ಮಾಡಲಿಲ್ಲ. ಇಲ್ಲಿ ಬಂದಿರತಕ್ಕಂತಹ ವರದಿಯನ್ನು ಅಲ್ಲಗಳೆಯತಕ್ಕಂತಹ ಕೆಲಸವನ್ನು ಮಾಡಿ. ತಾವೂ ಅಲಗಳೆಯಿರಿ, ಎಲ್ಲರೂ ಕೂಡ ಅಲ್ಲಗಳೆದು ಶಾಂತಿಯನ್ನು ಕಾಪಾಡತಕ್ಕಂತಹ ರೀತಿಯಲ್ಲಿ ಹೋಗಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅವರು ನೆನ್ನೆ ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ಅವರ ಗಮನಕ್ಕೆ ತಂದಿದ್ದಾರೆ ಅಷ್ಟೆ. ಆರೋಪ ಏನು ಮಾಡುವುದಕ್ಕೆ ಹೋಗಲಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಮೂಲಕ ಮೈಸೂರು ನಗರದ ಜನತೆಯಲ್ಲಿ ಮನವಿ ಮಾಡುತ್ತೇನೆ, ಎಲ್ಲರೂ ಶಾಂತಿಯನ್ನು ಕಾಪಾಡಿಕೊಳ್ಳಬೇಕು. ಜನರೆಲ್ಲರೂ ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶ ಇರಬೇಕು. ಮೈಸೂರಿನ ಸಂಸ್ಕೃತಿ ಉಳಿಯಬೇಕು. ಮೈಸೂರು ನಗರಕ್ಕೆ ಒಂದು ಭವ್ಯವಾದ ಇತಿಹಾಸ ಇದೆ, ಅಲ್ಲಿ ಯಾವಾಗಲೂ ಕೋಮು ಗಲಭೆಗಳು ಆಗಿಲ್ಲ. ಮೊನ್ನೆ ಏಪ್ರಿಲ್‌ನಲ್ಲಿ ಮತ್ತು ನೆನ್ನೆ ನಡೆದ ಎರಡು ಘಟನೆಗಳನ್ನು ಬಿಟ್ಟರೆ, ಬಹಳ ವರ್ಷಗಳಿಂದ ಮೈಸೂರಿನಲ್ಲಿ ಶಾಂತಿ ನೆಲೆಸಿರುವಂತಹ ಒಂದು ಪ್ರದೇಶ. ಅಲ್ಲಿ ಮತ್ತೆ ಈ ತರಹದ ಗಲಭೆಗಳು ಆಗಬಾರದು ಎಂದು ನಮ್ಮ ಆಸೆ. ಇದಕ್ಕೆ ಪ್ರಚೋದನೆ ಮಾಡತಕ್ಕಂಥಹ ಯಾವುದೇ ಸಂಘಟನೆಗಳು ಇರಲಿ, ನಾನು ಈ ಸಂಘಟನೆ ಆ ಸಂಘಟನೆ ಎಂದು ಹೇಳುವುದಿಲ್ಲ. ಮೂಲಭೂತವಾದಿಗಳು ಯಾರೇ ಇರಲಿ, ಕಮ್ಯುನಲ್ಸ್ ಯಾರೇ ಇರಲಿ, ಸಮಾಜದಲ್ಲಿ ಶಾಂತಿಯನ್ನು ಕದಡತಕ್ಕಂತಹ ಯಾವುದೇ ಸಂಘಟನೆ ಆಗಿರಲಿ, ಆ ಸಂಘಟನೆಗಳು ಇದರಲ್ಲಿ involve ಆಗಿದ್ದರೆ, ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ, ಈಗಲೂ ಹೇಳುತ್ತೇವೆ, ಮುಂದೆಯೂ ಹೇಳುತ್ತೇವೆ. It is not particular one assóciation, any organization as a matter of fact, ಸಮಾಜದಲ್ಲಿ ಯಾರೇ ಹುಳಿ ಹಿಂಡತಕ್ಕಂತಹ ಶಾಂತಿಯನ್ನು ಕದಡತಕ್ಕಂತಹ ಯಾವುದೇ ಸಂಘಟನೆ ಆಗಿದ್ದರೂ ಕೂಡ ಆ ಸಂಘಟನೆಯನ್ನು ನಿಸ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳಬೇಕು. ಅವರು ಆ ಪಕ್ಷಕ್ಕೆ ಬೆಂಬಲ ಕೊಡುತ್ತಾರೆ, ಈ ಪಕ್ಷಕ್ಕೆ ಬೆಂಬಲ ಕೊಡುತ್ತಾರೆಂದು ಅಲ್ಲ, ಸಮಾನ ಭಾವನೆಯಿಂದ ಅವರನ್ನು ಹತ್ತಿಕ್ಕತಕ್ಕಂತಹ ಕೆಲಸ ಆಗಬೇಕು. ಶಾಂತಿಯನ್ನು ಕದಡತಕ್ಕಂತಹ ವ್ಯಕ್ತಿಗಳು ಯಾರಿದ್ದಾರೆ ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ನಮ್ಮಲ್ಲಿ ಯಾವುದೇ ರಾಜಿ ಇಲ್ಲ. ನಾನು ನಿಮ್ಮ ಮೂಲಕ ಮತ್ತೆ ಪದೇ ಪದೇ ಮೈಸೂರು ನಗರದ ಜನತೆಯಲ್ಲಿ ಮನವಿ ಮಾಡುತ್ತೇನೆ, ನೀವು ಶಾಂತತೆಯನ್ನು ಕಾಪಾಡಿಕೊಳ್ಳಬೇಕು. ಉಹಾಪೋಹಗಳನ್ನು ಹಬ್ಬಿಸತಕ್ಕಂತಹ ಬಹಳ ಜನ ಇದ್ದಾರೆ, ಇಂತಹ ಉಹಾಪೋಹಾಗಳಿಗೆ ಕಿವಿಗೊಡಬಾರದು. ಪೋಲಿಸ್‌ನವರಿಗೆ full

freedom ಇರಬೇಕು. Let them have full freedom. Let them deal with the miscreants impartially. That is why I am underlining the word "Impartially." Impartial ಆಗಿ ಮಾಡಬೇಕು. Now we will be happy, if the Mysore city comes to normalcy. I am the first man to welcome it. Entire state ನೋಡುತ್ತಿದೆ. ಮೈಸೂರಿನಂತಹ ನಗರದಲ್ಲಿ ಇದು ಆಗಬಾರದು. ಇನ್ನು ಮುಂದೆ ಈ ತರಹದ್ದು ಆಗಬಾರದು ಎಂದು ನಾನು ಮನವಿ ಮಾಡುತ್ತೇನೆ. ಇವತ್ತು ಮಾನ್ಯ ಜನಾರ್ಧನರೆಡ್ಡಿ ಹೇಳಿರುವಂಥದ್ದು ಕೂಡ ಕಡತದಿಂದ ತೆಗೆದು ಹಾಕಬೇಕು. ಅವರು ಅವರ ಸದಸ್ಯರಿಗೆ ಬುದ್ಧಿವಾದ ಹೇಳಬೇಕು. ಈ ತರಹ ಎದ್ದು ಮಾತನಾಡಿ, ಆರೋಪಗಳನ್ನು ಮಾಡಿ ಹೊರಟು ಹೋದರೆ ಆಗುವುದಿಲ್ಲ. The House is supreme. You have got all the right to take any action against any member. ನಿಮಗೆ ಅಗೌರವ ತರತಕ್ಕಂತಹ ಕೆಲಸ ನಾವು ಮಾಡುವುದಕ್ಕೆ ಹೋಗುವುದಿಲ್ಲ. ನಿಮಗೆ ಹಾಗೂ ಈ ಸದನಕ್ಕೆ ಗೌರವ ತರತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಅವರು ಯಾರೇ ಆಗಲಿ, ಮಂತ್ರಿಗಳಾಗಲಿ, ಸದಸ್ಯರಾಗಲಿ, ಅಗೌರವ ತಂದರೆ, whatever you deem if fit under the provisions of law, you may take any action.

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಧರಣಿ ನಿರತ ಕಾಂಗ್ರೆಸ್ ಲಕ್ಷದ ಶಾಸಕರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಶ್ರೀ ಹೆಚ್. ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಮೈಸೂರಿನಲ್ಲಿ ಇಂತಃ ಒಂದು ಘಟನೆ ಆಗಬಾರದಿತ್ತು. ಮೈಸೂರು ನಗರದ ಜನತೆಯ ಶಾಂತಿ ಕಾಪಾಡುವುದಕ್ಕೆ ನಾವು ಈ ಸದನದ ಮುಖೇನ ಮನವಿ ಮಾಡಬೇಕೆಂದು ತಮ್ಮನ್ನು ಕ್ಕೋರುವುದರ ಜೊತೆಗೆ ಯಾವುದೇ ಸಂಘಟನೆಗಳು ಇಂತಹ ಶಾಂತಿಯನ್ನು ಭಂಗ ಮಾಡುವುದಕ್ಕೆ ಅವಕಾಶ ಕೊಡಬಾರದು, ನಿಷ್ಪಕ್ಷಪಾತವಾಗಿ ಇದನ್ನು ಖಂಡಿಬೇಕೆಂದು ನಾನು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇದು ಯಾವುದೆ ಸಂಘಟನೆ ಇದ್ದರೂ ತನಿಖೆ ಮಾಡಿ ಅದರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಮೈಸೂರು ನಗರದ ಜನತೆಯ ಶಾಂತಿಗೆ ಬಂಗ ತರದ ಹಾಗೆ ಕಾನೂನಿನ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖೇನ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಮಾನ್ಯ ಮುಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರುಗಳು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ತಮ್ಮ ಹಲವಾರು ವಿಚಾರಗಳನ್ನು ಈ ಸದನದ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಮೈಸೂರಿನಲ್ಲಿ

ನಡೆದಂತಹ ಘಟನಾವಳಿ ಬಹಳ ಸೂಕ್ಷ್ಮವಾದ ವಿಚಾರ. ಅಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗಬೇಕೆನ್ನುವಂತಹ ಕರೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕರೆದಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರು ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರು, ಆ ವಿಷಯದ ಬಗ್ಗೆಯೂ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ನಾನು ಸಭಾಧ್ಯಕ್ಷನಾಗಿ ಆಗಲೇ ಅವರು ಆ ಹೇಳಿಕೆ ಕೊಟ್ಟಂತಹ ಸಂದರ್ಭದಲ್ಲಿ ಅವರ ಹೇಳಿಕೆಯನ್ನು ಕಡತದಿಂದ ತಗೆದು ಹಾಕಬೇಕೆಂದು ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ. ಮತ್ತೊಮ್ಮೆ ನಾನು ಹೇಳುತ್ತಿದ್ದೇನೆ, ಆ ಹೇಳಿಕೆಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. ಮಾನ್ಯ ಸಚಿವರಾದ ಜನಾರ್ಧನರೆಡ್ಡಿಯವರಾಗಲಿ, ಇನ್ನಿತರೆ ಸದಸ್ಯರು ಆಕ್ಷೇಪಾರ್ಹವಾದ ಮಾತುಗಳನ್ನು ಹೇಳಿದ್ದರೆ, ಅದನ್ನು ನೋಡಿಕೊಂಡು ಆ ಹೇಳಿಕೆಗಳನ್ನು ತೆಗೆದು ಹಾಕಲಿಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಹಾಗಾಗಿ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಬೆಳಿಗ್ಗೆ ನಿಲುವಳಿ ಸೂಚನೆ ಸಲ್ಲಿಕೆ ಮುಖಾಂತರ ಕೆಲವೊಂದು ಪ್ರಾಥಮಿಕ ಹಂತದ ಚರ್ಚೆಯನ್ನು ಪ್ರಾರಂಭ ಮಾಡಿದರು, ಕಾನೂನು ಸುವ್ಯವಸ್ಥೆ ನಿಲುವಳಿ ಸೂಚನೆಯ ಅಡಿಯಲ್ಲಿ ನಿಯಮಾವಳಿ ಪ್ರಕಾರ ಬರುವುದಿಲ್ಲ, ಆದರೆ ಸಾರ್ವಜನಿಕ ಮಹತ್ವದ ವಿಚಾರವಾಗಿ ಪ್ರಸ್ತಾಪ ಮಾಡಿದ್ದರಿಂದ, ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ಸರ್ಕಾರದ ಪರವಾಗಿ ನಾವು ತಯಾರಿದ್ದೇವೆನ್ನುವಂತಹ ಮಾತನ್ನು ಮಾನ್ಯ ಸುರೇಶ್ ಕುಮಾರ್‌ರವರು ಬೆಳಿಗ್ಗೆಯೂ ಹೇಳಿದ್ದರು. ಸರ್ಕಾರವೂ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದಂತಹ ಸಂದರ್ಭದಲ್ಲಿ ಇದು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡಲು ಆಗುವುದಿಲ್ಲ ಎನ್ನುವ ಕಾರಣದ ಮೇಲೆ ಅದನ್ನು ನಿಯಮ 69ರಲ್ಲಿ ನಾನು ಪರಿವರ್ತನೆ ಮಾಡಿ ನಿಯಮ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದನ್ನು ನಾವು ನಾಳೆ ಪ್ರಶ್ನೋತ್ತರ ಕಾಲ ಮುಗಿದ ನಂತರ ಚರ್ಚೆಗೆ ತೆಗೆದುಕೊಳ್ಳೋಣ. ಇವತ್ತು ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದು, ಈ ವಿಷಯವನ್ನು ಚರ್ಚಿಸಲು ನಿಯಮ 69 ಕ್ಕೆ convert ಮಾಡಿದ್ದಾರೆ. ನಾವು ಚರ್ಚೆಗೆ ಸಿದ್ದವೆಂದು ಆಗಲೇ ಹೇಳಿದ್ದೇವೆ. ಇವತ್ತು ಇರುವ ಪರಿಸ್ಥಿತಿಯ ವಾತಾವರಣದ ಹಿನ್ನೆಲೆಯಲ್ಲಿ I suggest it is left to you to decide. ಈ ವಿಷಯವನ್ನು ಎರಡು-ಮೂರು ದಿವಸ ಆದ ಮೇಲೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಅನ್ನಿಸುತ್ತದೆ. ಇವತ್ತು ಇರುವ ವಾತಾವರಣದಲ್ಲಿ ನಾವು ಇಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತ ಆಗುವುದಿಲ್ಲ. ತಾವು ಬಹಳ ಸಾರಿ ಹೇಳುತ್ತೇವೆ, ನಮ್ಮ ದೊಡ್ಡ ಕರ್ತವ್ಯ ಇದೆ, ಜವಾಬ್ದಾರಿ ಇದೆ, ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ, ಈ ವಿಚಾರವನ್ನು ಖಂಡಿತವಾಗಿ ಚರ್ಚೆ

ಮಾಡೋಣ, after two days ಇದನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು ಎಂಬುದು ನನ್ನ ಅನಿಸಿಕೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರ ಛೇಂಬರ್‌ನಲ್ಲಿ ಮಾತನಾಡಿದ್ದೇವೆ. ಚರ್ಚೆ ಮಾಡುವುದರಿಂದ ಯಾವುದೇ ಪ್ರಚೋದನೆಗಳು ಆಗುವುದಿಲ್ಲ. ಚರ್ಚೆ ಮಾಡುವುದು ಶಾಂತಿ ನೆಲೆಸಲಿ ಎನ್ನುವ ಕಾಳಜಿಣಕ್ಕೋಸ್ಕರ. ಪರಿಹಾರ ಸಿಗಬೇಕೆನ್ನುವ ಕಾರಣಕ್ಕೋಸ್ಕರ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದು ಇಡೀ ರಾಜ್ಯಕ್ಕೆ ಗೊತ್ತಾಗಬೇಕು. ಆ ಕಾರಣದಿಂದ ಚರ್ಚೆಯಿಂದ ಯಾವುದೇ ಪ್ರಚೋದನೆಗಳು ಆಗುವುದಿಲ್ಲ. ನಾಳೆ ಪ್ರಶ್ನೋತ್ತರ ಅವದಿ ಮುಗಿದ ಮೇಲೆ ಈ ವಿಷಯವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ. ಮೊದಲನೇ ಪ್ರಶ್ನೆ ಸಿದ್ದು ಸವದಿ ಅವರು.

ಅ. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿಸಿ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ.

1 (142) ಶ್ರೀ ಸಿದ್ದುಸವದಿ (ತೇರದಾಳ್)

ಶ್ರೀ ಬಿ.ಶ್ರೀರಾಮುಲು. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು;

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಕೈಗೊಂಡ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ. ಈ ಕಾರ್ಯಕ್ರಮಗಳು ಪ್ರತಿಶತಃ ಅನುಷ್ಠಾನವಾದದ್ದು ಎಷ್ಟು;

ಪ್ರತಿಶತಃ 33.50 ಪ್ರಗತಿಯು ಏಪ್ರಿಲ್ 2009 ರಿಂದ ಮೇ 2009ರವರೆಗೆ ಆಗಿರುತ್ತವೆ.

ಇ. ಹಾಗಿದ್ದಲ್ಲಿ. ತೇರದಾಳ್ ಮತಕ್ಷೇತ್ರದಲ್ಲಿ ಈ ಕಾರ್ಯಕ್ರಮಗಳು ಅನುಷ್ಠಾನವಾಗಿರುತ್ತದೆಯೇ; ಹಾಗಿದ್ದಲ್ಲಿ, ಅವು ಯಾವುವು;

ತೇರದಾಳ ಮತಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಗತಗೊಳಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಫಲಾನುಭವಿಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

ಈ. ಅವುಗಳ ಸಂಖ್ಯೆ ಮತ್ತು ಫಲಾನುಭವಿಗಳ ವಿವರ ನೀಡುವುದು?